

ಆನಂದವನ

ಮಹಾತ್ಮಾ

G. R.

ಮಹಾಬಲಭಟ್ಟ

೩ ಆಣೆ

ಶ್ರೀ ಶೇಷಾಚಲ ಗ್ರಂಥಮಾಲಿ, ಆನಂದವನ.

ಮಹಾತ್ಮಾ

(ಸಾಮಾಜಿಕ ಕಥೆ.)

ಲೇಖಕರು:-

ಜಿ. ಆರ್. ಮಹಾಬಲಭಟ್ಟ

'ವೇದಾಂತ ಶಿರೋಮಣಿ' 'ವೇದಾಂತ ವಿಶಾರದ'

ದೂರ್ವಾಸಪುರಂ

ಪ್ರಕಾಶಕರು:—

ಭಿ. ಪ. ಕಾಳೆ,

ಶ್ರೀ ಶೇಷಾಚಲ ಪ್ರೆಸ್ಸ, ಆನಂದವನ (ಅಗಡಿ)

(೧ನೇ ಆವೃತ್ತಿ)

1940

೩ ಆಣೆ

ನಮ್ಮದೊಂದು ಮಾತು.

ಇದೊಂದು ಬೋಧಪ್ರದವಾದ ಸಾಮಾಜಿಕ ಕತೆಯು. ಈ ಮೊದಲು ಸದ್ಬೋಧ ಚಂದ್ರಿಕೆಯಲ್ಲಿ "ಪ್ರಕಟವಾದ ಕಮಲಾಕಾಂತ ಸಾಧುವಿಗೆ ಪ್ರತಿಕೂಲವಾಗಿದೆ. ಕಮಲಾಕಾಂತ ಸಾಧುವನ್ನು ಓದಿದ ವಾಚಕರು ತತ್ಕ್ಷಣ ಈ "ಮಹಾತ್ಮಾ" ಕಥೆಯನ್ನೋದುವದು ಹಿತಪ್ರದವಾದುದು. ಮಹಾತ್ಮರೆಲ್ಲರೂ ಇಂಥವರೇ (ಕಮಲಾಕಾಂತನಂತಹರೆ) ಸರಿಯೆಂಬ ಭಾವನೆಯು ಯಾರಲ್ಲಾದರೂ ಹುಟ್ಟಿದ್ದರೆ ಅದು ಈ ಕಥೆಯ ವಾಚನದಿಂದ ನಿವಾರಣವಾದೀತೆಂದು ನನ್ನ ಭಾವನೆ" ಎಂದು ಲೇಖಕರು ಆಶಿಸಿದ್ದಾರೆ.

ಪ್ರಕಾಶಕ

ಇದನ್ನು ಭಿ. ಪ. ಕಾಳೆ ಇವರು ಆನಂದವನ-ಅಗಡಿಯೊಳಗಿನ ತಮ್ಮ ಶ್ರೀ ಶೇಷಾಚಲ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಮುದ್ರಿಸಿದರು.

ಮಹಾತ್ಮಾ

'ಎಲ್ಲಿಯ ಸಾಧು-ಸಂತರು? ಎಲ್ಲಿಯ ಮಹಾತ್ಮರು? ಎಲ್ಲರೂ ಮೋಸಗಾರರೇ.' ಎಂದ ಮಧುರನು 'ಆದರೂ ಕೆಲವೆಡೆ ನಿಜವಾದ ಮಹಾತ್ಮರೂ ಇರುತ್ತಾರೆ' ಎಂಬ ನಿರ್ಧಾರಕ್ಕೆ ಬಂದುದು ಹೇಗೆ!

೧

"ಯಾವನೋ ಒಬ್ಬ ಧೂರ್ತನಿರಬಹುದವನು ಇಂತಹ ಬಹಳ ಜನ ಧೂರ್ತರು ಹಣಸಂಪಾದನೆಗಾಗಿ ಸಾಧು-ಸಂತರ ವೇಷವನ್ನು ಧರಿಸಿ, ಜನಗಳನ್ನು ಮೋಸಕ್ಕೆ ಸಿಲುಕಿಸುವವರು ಅಲ್ಲಲ್ಲಿ ತಿರುಗುತ್ತಿರುತ್ತಾರೆ."

"ಇಲ್ಲ. ಆ ಮನುಷ್ಯನು ಯಾರಿಂದಲೂ ಹಣಕಾಸುಗಳನ್ನು ತೆಗೆದುಕೊಳ್ಳುವುದಿಲ್ಲ. ಹೆಚ್ಚೇನು? ಹಣವನ್ನು ಕೈಯಿಂದ ಮುಟ್ಟುವುದೂ ಇಲ್ಲ. ತಿನ್ನುವ ವಸ್ತುಗಳನ್ನು ಮಾತ್ರ ಯಾರಾದರೂ ಕೊಟ್ಟರೆ ತೆಗೆದುಕೊಳ್ಳುವನು. ಅದನ್ನೂ ಕೂಡ ಶೇಖರ ಮಾಡುವುದಿಲ್ಲ. ಹೊಟ್ಟೆಗೆ ಸಾಕಾಗುವಷ್ಟು ಮಾತ್ರ ಇಟ್ಟುಕೊಂಡು, ಉಳಿದುದನ್ನು ಯಾರಿಗಾದರೂ ಕೊಟ್ಟುಬಿಡುವನು. ಇದೊಂದೇ ವಿಶೇಷ ವಿಷಯದಿಂದ ಆತನು ಧೂರ್ತನಲ್ಲವೆಂದು ತಿಳಿಯಬಹುದಲ್ಲವೇ?"

"ಆತನು ತನ್ನಲ್ಲಿ ಯಾವ ವಿಶೇಷ ಗುಣವನ್ನು ಪ್ರಕಟಗೊಳಿಸುತ್ತಿರುವನು?"

"ಏನೂ ಇಲ್ಲ. ತನ್ನ ಯಾವುದೊಂದು ವಿಶೇಷವನ್ನೂ ಹೇಳುವುದಿಲ್ಲ; ಆದರೂ ಆತನು ಭೂತ-ಭವಿಷ್ಯದ್ವರ್ತಮಾನ ಕಾಲಗಳ ಸಂಗತಿಗಳನ್ನು ಸ್ವಲ್ಪವೂ ತಡೆಯಿಲ್ಲದೆ ಹೇಳುತ್ತಾನೆ. ಜನಗಳ ಮನಸ್ಸಿನಲ್ಲಿರುವ ಸಕಲ ವಿಚಾರಗಳನ್ನು ಆತನು ತಿಳಿಯಬಲ್ಲನು. ಆತನ ಹಸ್ತಸ್ಪರ್ಶಮಾತ್ರದಿಂದಲೇ ಸಮಸ್ತ ರೋಗಗಳು ಒಡನೆ ಗುಣವಾಗುವುವು. ಅವನು ಆರಾರಿಗೆ ಯಾವ ಯಾವ ವರವನ್ನು ಕೊಡುತ್ತಾನೆಯೋ; ಅವರವರಿಗೆ ಅದು ಫಲಿಸಿಯೇ ಫಲಿಸುತ್ತದೆ!"

"ಆತನ ಈ ವಿಶೇಷ ಸಂಗತಿಗಳನ್ನು ಇದುವರೆಗೆ ಯಾರಾದರೂ ಪರೀಕ್ಷಿಸಿರುವರೇನು?"

"ಇರುವರು—ಪರೀಕ್ಷಿಸಿದವರು ಬೇಕಾದಷ್ಟು ಜನರಿರುವರು. ಯಾರು ಯಾರು ಆ ಮನುಷ್ಯನ ಸುತ್ತುವರಿದು ನೂರಾರು ಪ್ರಶ್ನೆಗಳನ್ನು ಕೇಳಿ ತಿಳಿದುಕೊಂಡಿರುವರೋ, ಅವರೆಲ್ಲರೂ ಪರೀಕ್ಷಿಸಿ, ಅನುಭವಿಸಿರುವರು. ಆತನು ಯಾರೊಂದಿಗೂ ಹೆಚ್ಚಾಗಿ ಸಂಭಾಷಣೆ ಮಾಡುವುದಿಲ್ಲ. ಜನಗಳೆದುರಿಗೆ ತನ್ನ ವಿಶೇಷವನ್ನು ಹೊರಪಡಿಸುವದೂ ಇಲ್ಲ. ಆತನ ಭಕ್ತನೊಬ್ಬನಿಂದ ಗಂಗೆಯ ದಡದಲ್ಲಿ ಆತನಿಗಾಗಿ ಕಟ್ಟಿದ ಗುಡಿಸಲೊಂದಿದೆ. ಆತನು ಅಲ್ಲಿಯೇ ಯಾವಾಗಲೂ ಇರುತ್ತಾನೆ. ಬೆಳಿಗ್ಗೆ ಎಂಟು ಘಂಟೆಯಿಂದಾರಂಭಿಸಿ ಮಧ್ಯಾಹ್ನ ಹನ್ನೊಂದು ಘಂಟೆಯುವರೆಗೆ ಮೂರು ಗಂಟೆಗಳ ಕಾಲ ಮಾತ್ರ ಜನಗಳಿಗೆ ದರ್ಶನ ಕೊಡುತ್ತಾನೆ. ಆ ಕಾಲದಲ್ಲಿಯೇ ಯಾರು ಯಾರು ಏನೇನನ್ನು ಕೇಳುತ್ತಾರೋ, ಅದಕ್ಕೆಲ್ಲಾ ಉತ್ತರವು ಸಿಗುವುದು."

ಆಗ ಅಪರಾಹ್ಣ ಕಾಲವಾಗಿದ್ದಿತು. ನಾನು ನನ್ನ ಸ್ನೇಹಿತನಾದ ರಾಮಚಂದ್ರನ ಮನೆಯಲ್ಲಿ ಅರಾಮಕುರ್ಚಿಯ ಮೇಲೆ ಅರ್ಧ ಮಲಗಿಕೊಂಡು ಮಾತನಾಡುತ್ತಿದ್ದೆನು. ನಾವಿದ್ದ ಕೋಣೆಯಲ್ಲಿ ನಾನೂ ರಾಮಚಂದ್ರನೂ ಇಬ್ಬರೇ ಇದ್ದೆವು.

"ರಾಮಚಂದ್ರ, ಋಜು ಬುದ್ಧಿಯುಳ್ಳ ನೀನು ಮೋಸಗಾರರನ್ನು ತಿಳಿಯಲಾರೆ. ಅದವರ ಮೋಸದ ಚಾತುರ್ಯ. ಆ ವಂಚಕನು ಯಾವುದೋ ಉಪಾಯದಿಂದ ಜನರ ಮನದಲ್ಲಿರುವುದನ್ನು ತಿಳಿದುಕೊಂಡು, ಅವರು ಬಂದಾಗ ಅವರೆದುರಿನಲ್ಲಿ ತನ್ನ ತ್ರಿಕಾಲದರ್ಶಿತ್ವವನ್ನು ತೋರ್ಪಡಿಸುತ್ತಾನೆ. "ಜನಗಳಿಗಾತನು ವರ ಕೊಡುತ್ತಾನೆ; ರೋಗ ಗುಣಮಾಡುತ್ತಾನೆ." ಎಂದು ಹೇಳಿದಿಯಲ್ಲವೆ? ಅದು ಅತಿಯಾಗಿ ಭಕ್ತಿಯಿಟ್ಟು ನಂಬಿದುದರ ಫಲವೇ ಇರುವದು. ಅಸಾಧ್ಯವಾದ ರೋಗಗಳೂ ಕೂಡ ಹೆಚ್ಚಾದ ನಂಬಿಕೆಯಿಂದ ಗುಣವಾಗುವುವು. ವಿಶ್ವಾಸಮಾತ್ರದಿಂದಲೇ ಎಷ್ಟೋ ಇಷ್ಟಾರ್ಥಗಳು ಪೂರ್ಣವಾಗುತ್ತವೆ. ವಾಸ್ತವಿಕವಾಗಿ ಆ ಮನುಷ್ಯನಿಗೆ ಲೋಕೋತ್ತರವಾದ ಶಕ್ತಿಯೊಂದಿದ್ದರೆ, ಆ ಜನಗಳ ಗಲಾಟೆಯಿರುವ ಸ್ಥಳದಲ್ಲೆಂದಿಗೂ ಆತನು ವಾಸಮಾಡುತ್ತಿರಲಿಲ್ಲ. ಅಂತಹ ಮಹಾತ್ಮನಿಗೆ ಮನುಷ್ಯರ ವಾಸನೆಯೂ ಇಲ್ಲದ ಅಡವಿಯೇ ಸರಿಯಾದ ಸ್ಥಳವು."

ರಾಮಚಂದ್ರನು ಹೇಳಿದನು —"ನೀನೀಗಂದಂತೆಯೇ ಆ ಸಾಧುವಿನ ಹತ್ತಿರ ಒಬ್ಬ ಮನುಷ್ಯನು ಪ್ರಶ್ನೆ ಮಾಡಿದನು."

"ಸ್ವಾಮೀ, ಶಾಂತವಾದ ಏಕಾಂತಸ್ಥಳವನ್ನು ಬಿಟ್ಟು ಈ ಜನ ನಿಬಿಡ ವಾದ ಸ್ಥಳಕ್ಕೆ ಪೂಜ್ಯರು ಏಕೆ ಬರೋಣಾಯಿತು?" ಎಂದು. ಈ ಪ್ರಶ್ನೆ ಯಿಂದ ಸಾಧುವಿನ ಗಂಭೀರವಾದ ಮುಖದಲ್ಲಿ ಸ್ವಲ್ಪವೂ ವ್ಯತ್ಯಾಸವಾದುದು ತೋರಲಿಲ್ಲ. ಆತನು ಸಿಟ್ಟಾಗಿರುವುದನ್ನು ಇದುವರೆಗೆ ಯಾರೂ ನೋಡಿಲ್ಲ. ಪ್ರಶ್ನೆ ಮಾಡುವವರು ಕುಟಿಲವಾದ, ಅಯೋಗ್ಯವಾದ ಪ್ರಶ್ನೆಗಳನ್ನೆಲ್ಲಾ ಕೇಳು ತ್ತಿರುತ್ತಾರೆ; ಆದರೆ ಅದರಿಂದ ಸಾಧುವಿನ ಮುಖದಲ್ಲಿ ಯಾವ ವಿಕಾರವೂ ಉಂಟಾಗುವುದಿಲ್ಲ. ಅಂತಹ ಕಾಲದಲ್ಲಿ ಆತನು ಸುಮ್ಮನಿದ್ದುಬಿಡುವನು. ಏನೂ ಹೇಳುವುದಿಲ್ಲ. ಮೇಲೆ ಕೇಳಿದ ಪ್ರಶ್ನೆಗೆ ಮಹಾತ್ಮನೀ ರೀತಿಯಾಗಿ ಉತ್ತರವಿತ್ತನು:—"ನಮ್ಮನ್ನು ಪ್ರೇರಿಸುವುದು ಭಗವಂತನ ಇಚ್ಛೆಯು. ಅದಕ್ಕೆ ಅಧೀನನಾಗಿಯೇ ನಾನಿಲ್ಲಿಗೆ ಬಂದೆನು. ಈ ಪುಣ್ಯಮಾಸದಲ್ಲಿ ಗಂಗಾ ಸ್ನಾನ ಮಾಡಬೇಕೆಂದಿಲ್ಲಿ ವಾಸಮಾಡಿದೆನು. ಈ ತಿಂಗಳು ಮುಗಿದೊಡನೆ ಬೇರೆಲ್ಲಿಗಾದರೂ ಹೋಗುವೆನು." ಎಂದು.

ರಾಮಚಂದ್ರನೀ ಮೇರೆಗೆ ಹೇಳಿದುದನ್ನು ಕೇಳಿ ನಾನೆಂದೆನು:— "ಇದೆಲ್ಲಾ ನಿನಗೆ ಹೇಗೆ ತಿಳಿಯಿತು? ನಿನ್ನವರಲ್ಲಿ ಯಾರಾದರೂ ಅಲ್ಲಿಗೆ ಹೋಗಿದ್ದರೇನು?"

ರಾಮಚಂದ್ರನು ನುಡಿದನು—"ಇಲ್ಲ; ನಾನೇ ಹೋಗಿದ್ದೆನು. ಆ ಸಾಧುವಿನ ಪ್ರಸಿದ್ಧಿಯನ್ನು ಜನರ ಮೂಲಕವಾಗಿ ಕೇಳಿ, ನೋಡಿ ಬರೋಣ ವೆಂದು ಹೋಗಿದ್ದೆನು. ನಮಸ್ಕಾರವನ್ನು ಮಾಡಿ ನಾನು ಕುಳಿತೊಡನೆ ಸಾಧುವು. 'ನೀನೇನನ್ನಿಚ್ಛಿಸಿ ಬಂದಿರುತ್ತೀ?' ಎಂದು ನನ್ನನ್ನು ಕುರಿತು ಕೇಳಿ ದನು. 'ತಮ್ಮ ಪಾವನಕರವಾದ ದರ್ಶನವನ್ನು ಮಾತ್ರ.' ಎಂದು ಹೇಳಿ ದೆನು. ಸಾಧುವು:—'ಇಲ್ಲ; ಬರೀ ದರ್ಶನಕ್ಕಾಗಿ ನೀನು ಬಂದಿಲ್ಲ. ಏನೋ ನಿನ್ನ ಮನದಲ್ಲಿ ಕೇಳಬೇಕೆಂದಿದೆ.' ನಾನು ತಿರುಗಿ ಹೇಳಿದೆನು.—'ಬೆಳಗಿನ ಕಾಲವನ್ನು ಬಿಟ್ಟು ಬೇರೆ ಕಾಲದಲ್ಲಿ ಪೂಜ್ಯರ ದರ್ಶನವು ದೊರಕುವುದೇ? ಎಂದು ತಿಳಿಯಬೇಕೆಂದಿದೆ. ಅಲ್ಲದೆ ಎರಡು-ಮೂರು ಪ್ರಶ್ನೆಗಳನ್ನು ನಾನು ಕೇಳ ಬೇಕಾಗಿದೆ."

ಅದಕ್ಕೆ ಮಹಾತ್ಮನು ಹೇಳಿದನು:—"ನನಗೀಗ ನಿಲ್ಲಲು ಸಾಧ್ಯವಿಲ್ಲ. ಕಾಲವು ಮೀರುತ್ತಿದೆ. ನನ್ನ ನಿಯಮದ ಪ್ರಕಾರವಾಗಿ ಬೇರೆ ಕಾಲದಲ್ಲಿ ಯಾರ ಪ್ರಶ್ನೆಯನ್ನೂ ಕೇಳುವಂತಿಲ್ಲ; ಬೇರೆ ಕಾಲದಲ್ಲಿ ನಾನು ಗುಡಸಿಲಿ ನಿಂದ ಹೊರಗೆ ಕೂಡ ಬರುವದಿಲ್ಲ. ಆದರೂ ನಿನಗೇನೋ ಕೇಳುವ ಕುತೂಹಲವಿರುವದರಿಂದ ಸಂಜೆಯ ಹೊತ್ತಿಗೆ ಇಲ್ಲಿಗೆ ಬಾ."

ಅದನ್ನು ಕೇಳಿ ಮನದೊಳಗೇ ಆನಂದಿಸುತ್ತಾ ಅಲ್ಲಿಂದ ಹಿಂದಿರುಗಿದೆನು. 'ಅದೇನು ನನಗಾಗಿ ಮಹಾತ್ಮನು ತನ್ನ ನಿಯಮವನ್ನು ಬದಲಾಯಿಸಿದನೇ!' ಎಂದು ಆಶ್ಚರ್ಯಪಟ್ಟೆನು.

ನಾನು ಕೇಳಿದೆನು:—"ಹಾಗಾದರೆ ಈ ದಿನ ಸಂಜೆಗೆ ನೀನಾ ಸಾಧುವನ್ನು ನೋಡಲು ಹೋಗುತ್ತೀಯಾ?"

ರಾಮಚಂದ್ರನು ಹೇಳಿದನು:—"ಹೌದು ನನ್ನೊಡನೆ ನೀನೂ ಬರಬೇಕು. ನೀನಿಂತಹ ಸಂಗತಿಗಳನ್ನು ನಂಬುವದಿಲ್ಲ. 'ಎಲ್ಲರೂ ಮೋಸಗಾರರು; ಸುಳ್ಳುಹೇಳುವವರು' ಎಂದೆನ್ನುತ್ತೀ. ನಿನ್ನೀ ಭ್ರಮೆಯನ್ನು ಹೋಗಲಾಡಿಸುವದಕ್ಕಾಗಿಯೇ ನಾನೀ ರೀತಿಯಾಗಿ ಯತ್ನಿಸಿರುವೆನು. ಆ ಮಹಾತ್ಮನ ಸಾಮರ್ಥ್ಯವನ್ನು ಕಂಡು, ಆತನು ನಿಜವಾಗಿಯೂ ತ್ರಿಕಾಲದರ್ಶಿಯಾದ ಮಹಾತ್ಮನೆಂದು ನಾನು ನಂಬಿರುವೆನು. ಇಂತಹ ಮಹಾತ್ಮರು ಭೂಮಿಯಲ್ಲಿ ವಿರಳವಾಗಿರುವರು. ಇವರ ದರ್ಶನವು ತುಂಬಾ ಪಾವನವಾದುದು; ಅಲ್ಲದೆ ಹಿತಕರವಾದುದು. ಆ ಮಹಾತ್ಮನನ್ನು ನೀನು ನೋಡಿದೊಡನೆಯೇ ಈಗಲೂ ಕೂಡ ಭೂಮಿಯಲ್ಲಿ ಮಹಾತ್ಮರಿದ್ದೇ ಇರುವರು" ಎಂದು ನೀನೂ ಕೂಡ ನಂಬುವೆ.

ನಾನು ಗಟ್ಟಿಯಾಗಿ ನಕ್ಕು ಹೇಳಿದೆನು:—"ರಾಮಚಂದ್ರ, ನೀನು ಖಂಡಿತವಾಗಿಯೂ ಋಜು ಬುದ್ಧಿಯುಳ್ಳ ಮೂಢನಿರುವೆ. ಈ ಮೋಸದ ಸಂಸಾರದಲ್ಲಿ ಸರಳ ಪ್ರಕೃತಿಯವನಾಗಿಯೂ, ಎಲ್ಲರಲ್ಲಿಯೂ ನಂಬಿಕೆಯನ್ನಿಡತಕ್ಕವನಾಗಿಯೂ ಇರುವವನು ನೀನೊಬ್ಬನೇ ಸರಿ. ಇಂತಹ ವಿಷಯಗಳಲ್ಲಿ ಒಡನೆ ನಂಬಿಕೆಯಿಡುವವನು ನಮ್ಮ ಸ್ನೇಹಿತರೊಳಗೆ ನೀನೊಬ್ಬನೇ ಇರುತ್ತೀ. ಎಲ್ಲಿಯ ಸಾಧು-ಸಂತರು? ಎಲ್ಲಿಯ ಮಹಾತ್ಮರು? ಎಲ್ಲರೂ ಮೋಸಗಾರರೇ. ಜನರನ್ನು ವಂಚಿಸಲು ಮಾಡಿದ ಮೋಸಗಾರರ ಯುಕ್ತಿಯಿದು. ಇದರಿಂದ ಆತನಿಗೆ ಏನೋ ಪ್ರಯೋಜನವಿದೆ. ಆದ್ದರಿಂದಲೇ ಜನಗಳ ಮನಸ್ಸಿನಲ್ಲಿ ತನ್ನ ವಿಷಯವಾಗಿ ನಂಬಿಕೆಯುಂಟಾಗುವಂತೆ ಯತ್ನಿಸುತ್ತಾನೆ. ನಾವಿಬ್ಬರೂ ಆತನೆದುರಿಗೆ ಹೋದರೆ ಅವನ ಮೋಸವನ್ನು ಹೊರಗೆಡವದೆ ಬಿಡುವದಿಲ್ಲ. ನಿನಗಿದು ಇಷ್ಟವಿರುವುದೇ?"

ರಾಮಚಂದ್ರನು ನಿಶ್ಚಯಸ್ವರದಿಂದ ಹೇಳಿದನು:-"ಆಗಲಿ. ನಾನೊಪ್ಪುತ್ತೇನೆ. ಆ ಮಹಾತ್ಮನೆದುರಿನಲ್ಲಿ ನಿಂತು ನೀನು ಯಥೇಚ್ಛವಾಗಿ ಪ್ರಶ್ನೆ ಕೇಳಬಹುದು. ಮನಬಂದಂತೆ ಪರೀಕ್ಷಿಸು; ಆದರೆ ಸಭ್ಯತೆಯನ್ನು ಮೀರದೆ ಗೌರವದಿಂದ ವರ್ತಿಸಿ ಪರೀಕ್ಷಿಸಬೇಕು. ಆ ಮಹಾತ್ಮನಲ್ಲಿ ನನಗೇನೂ ಸಂಶಯ

ವಿಲ್ಲ. ಆ ಮಹಾತ್ಮನು ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನೇ ಕೊಡುತ್ತಾನೆಂದು ನಾನು ಚನ್ನಾಗಿ ನಂಬಿರುತ್ತೇನೆ; ಆದರೆ ಈ ವಿಷಯದಲ್ಲಿ ನೀನೂ ಒಂದು ಪ್ರತಿಜ್ಞೆಯನ್ನು ಮಾಡಬೇಕು.”

ನಾನು ಹೇಳಿದೆನು:--“ಏನು ಪ್ರತಿಜ್ಞೆ?”

ಆತನು ಹೇಳಿದನು:—“ಮಹಾತ್ಮನು ನಿನ್ನ ಪ್ರಶ್ನೆಗಳಿಗೆ ನಿಜವಾದ ಉತ್ತರವನ್ನು ಕೊಟ್ಟದ್ದೇ ಆದರೆ ನೀನು ಆ ಮೇಲೆ ಅಂತಹ ಮಹಾತ್ಮರ ಪರಿಹಾಸ ಮಾಡುವದನ್ನು ಬಿಟ್ಟುಬಿಡಬೇಕು. ಇಂದ್ರಿಯಗಳಿಗೆ ಅಗೋಚರವಾದ ವಸ್ತುವು ಯಾವುದೂ ಇಲ್ಲವೆಂದೂ, ಅಂತಹ ವಸ್ತುವನ್ನು ನೋಡಿರುತ್ತೇವೆಂದು ಹೇಳತಕ್ಕವರೆಲ್ಲರೂ ಮೋಸಗಾರರೆಂದೂ ಹೇಳುವದನ್ನು ನೀನು ಆ ಮೇಲೆ ಬಿಟ್ಟುಬಿಡಬೇಕು. ಅಂತಹ ವಿಷಯವಾಗಿ ನಾನು ಮಾತನಾಡುತ್ತಿದ್ದಾಗ ಹಾಸ್ಯ ಮಾಡುತ್ತಿರುವಿಯಷ್ಟೆ? ಅದನ್ನೂ ಆ ಮೇಲೆ ಬಿಟ್ಟುಬಿಡಬೇಕು. ಇದೇ ಪ್ರತಿಜ್ಞೆ.”

ನಾನು ಹೇಳಿದೆನು:—“ಆಗಲಿ. ಹಾಗೆಯೇ ಒಪ್ಪುತ್ತೇನೆ; ಆದರೆ ಆ ಮೋಸಗಾರನಾದ ಸಾಧುವು ಯಾವ ಪ್ರಶ್ನೆಗೆ ನಿಜವಾದ ಉತ್ತರವನ್ನು ಹೇಳಲಾರನೋ, ಅಂತಹ ಪ್ರಶ್ನೆಯನ್ನೇ ನಾನು ಮಾಡುತ್ತೇನೆ; ಮತ್ತು ನಾನು ಕೇಳಿದುದಕ್ಕೆ ಯಾವ ಉತ್ತರವನ್ನಾತನು ನುಡಿಯುವನೋ, ಅದನ್ನು ಬರೆದು ನಿನ್ನ ಹತ್ತಿರವೇ ಇಡುವೆನು; ಯಾಕಂದರೆ, ಆತನು ಹೇಳಿದುದು ಸುಳ್ಳೋ ನಿಜವೋ ಎಂಬುದನ್ನು ಆ ಮೇಲೆ ನಿನಗೆ ತೋರಿಸಲು ಬೇಕಾಗುವದು. ಮಹಾತ್ಮನೆಂದು ಹೆಸರಿಟ್ಟುಕೊಂಡ ಆತನ ಉತ್ತರವು ಸುಳ್ಳಾದುದಾದರೆ, ನೀನೂ ಕೂಡ ಆ ಮೇಲೆ ಅಂತಹ ಮೋಸಗಾರರ ಸಂಗತಿಯನ್ನು ಬಿಟ್ಟುಬಿಡಬೇಕು. ಹೂಂ. ಹಾಗಾದರೆ ಇದು ನಿಶ್ಚಯವಷ್ಟೆ? ಹೇಳು, ಸಾಯಂಕಾಲ ಎಷ್ಟು ಹೊತ್ತಿಗೆ ಅಲ್ಲಿಗೆ ಹೋಗಬೇಕು?”

ರಾಮಚಂದ್ರನು ಹೇಳಿದನು:—“ಸಂಜೆ ಏಳು ಗಂಟೆಗೆ ನೀನಿಲ್ಲಿಗೆ ಬಾ. ನಾವಿಬ್ಬರೂ ಸೇರಿ ಹೋಗೋಣ. ಆ ಕಾಲದಲ್ಲಿ ಗಂಗೆಯ ದಡದಲ್ಲಿಯೂ ಯಾರೂ ಓಡಾಡುವದಿಲ್ಲ. ಮಹಾತ್ಮನ ಹೊರತು ಗುಡಿಸಿಲಿನಲ್ಲಿಯೂ ಆಗ ಯಾರೂ ಇರಲಾರರು.”



೨

ನಾನು ಅಲಹಾಬಾದಿನಲ್ಲಿ (ಪ್ರಯಾಗ) ವಾಸಮಾಡುತ್ತಿದ್ದೆನು. ನನ್ನ ತಂದೆಯು ಜಮೀನ್ದಾರನು. ನಾನು ಇಂಗ್ಲಿಷ್ ವಿದ್ಯೆಯನ್ನೋದಲಾರಂಭಿಸಿ ಅಲಹಾಬಾದ್ ಯೂನಿವರ್ಸಿಟಿಯಲ್ಲಿ ಎಂ. ಎಸ್‌ಸಿ. ಪರೀಕ್ಷೆಯವರೆಗೆ ಓದಿ ಆ ಮೇಲೆ ಇಂಜಿನೀಯರಿಂಗ್ ಕಾಲೇಜಿನಲ್ಲಿ ಐದು ವರ್ಷ ಕಲಿತು ಅದರಲ್ಲಿಯೂ ಪ್ಯಾಸಾದೆನು. ಪ್ಯಾಸಾದ ಮೇಲೆ ನನ್ನ ತಂದೆಯು ನೂರಾರು ಪ್ರಯತ್ನಗಳನ್ನು ಮಾಡಿ ಕೆಲವು ಜನ ದೊಡ್ಡ ಮನುಷ್ಯರಿಂದ ಶಿಫಾರಸ್ ಮಾಡಿಸಿ, ಕಲ್ಕತ್ತೆಯ ದೊಡ್ಡ ಕಾರ್ಖಾನೆಯೊಂದರಲ್ಲಿ ನನಗೆ ಕೆಲಸ ಸಿಗುವಂತೆ ಮಾಡಿದನು. ನನ್ನ ಜಾಣತನದಿಂದಲೂ ಅದೃಷ್ಟದಿಂದಲೂ ನನಗೆ ಸಂಬಳವು ಕ್ರಮವಾಗಿ ಏರುತ್ತಾ ತಿಂಗಳಿಗೆ ಐನೂರು ಬರುವಂತಾಯಿತು.

ಇಂಗ್ಲಿಷ್ ವಿದ್ಯಾಭ್ಯಾಸದ ಮಹಿಮೆಯಿಂದಲೋ, ಯೂನಿವರ್ಸಿಟಿಯ ಸ್ವತಂತ್ರ ವಾಯುಸೇವನೆಯಿಂದಲೋ, ದೇಶದ ಈಗಿನ ಸ್ವತಂತ್ರ ವಾತಾವರಣ ಸಾಮರ್ಥ್ಯದಿಂದಲೋ ಕಲಿಕಾಲ ಪ್ರಭಾವದಿಂದಲೋ ಯಾವುದರಿಂದಲೋ ತಿಳಿಯಲಾರೆ, ನಾನಂತೂ ಹೆಚ್ಚಿನ ನಾಸ್ತಿಕನಾಗಿದ್ದೆನು. ನಾಸ್ತಿಕಮತವನ್ನು ಪ್ರಚುರಗೊಳಿಸಿದ ಪ್ರಸಿದ್ಧ ಚಾರ್ವಾಕರಿಗಿಂತಲೂ ಮಿಗಿಲೆನಿಸಿ ನಾನಿದ್ದೆನು. ಇಂದ್ರಿಯ ಸಂತೃಪ್ತಿಯೇ ಮುಖ್ಯವಾದ ಧರ್ಮವೆಂದು ನನ್ನ ಅಭಿಪ್ರಾಯವಿದ್ದಿತು.

ನನಗೆ ವಿವಾಹವು ಬೇಗನೆ ಆಗಬೇಕೆಂದು ನನ್ನ ತಾಯಿಯು ಬಯಸುತ್ತಿದ್ದಳು. ನಾನಾದರೋ ಆ ವಿವಾಹಬಂಧನದಿಂದ ಆದಷ್ಟು ದೂರವಿರಲು ತಕ್ಕ ಪ್ರಯತ್ನಗಳನ್ನು ಮಾಡುತ್ತಿದ್ದೆನು. ಬಹಳ ಕಡೆಗಳಲ್ಲಿ ನನ್ನ ವಿವಾಹಕ್ಕೆ ಪ್ರಯತ್ನಗಳು ಜರುಗಿದವು. ಅವೆಲ್ಲವನ್ನೂ ಏನೇನೋ ಕುಂಟು ನೆವವನ್ನು ಹೇಳಿ ನಿಲ್ಲಿಸಿಬಿಟ್ಟಿದ್ದೆನು. ಈಗ ನಾನು ಒಂದು ತಿಂಗಳ ರಜೆ ಪಡೆದು ಕಲ್ಕತ್ತೆಯಿಂದ ಅಲಹಾಬಾದಿಗೆ ಬಂದಿದ್ದೆನು. ಮನೆಗೆ ಬಂದೊಡನೆ ನನ್ನ ತಾಯಿಯು ಈ ಸಾರೆ ಸ್ಪಷ್ಟವಾಗಿ ಹೇಳಿಬಿಟ್ಟಳು:-“ಮಗೂ, ಮಧುರ, ಈ ಸಾರೆ ನಿನಗೆ ವಿವಾಹವಾಗಲೇಬೇಕು; ನಿನ್ನ ಯಾವ ಕಾರಣವೂ ಈ ಸಾರೆ ಪ್ರಯೋಜನವಾಗಲಾರದು. ಕಲ್ಕತ್ತೆಯಲ್ಲಿಯೇ ನಿನಗಿರಬೇಕೆಂದಿದ್ದರೆ ಹೆಂಡತಿಯನ್ನೂ ಕರೆದುಕೊಂಡು ಹೋಗಬಹುದು.”

ತಾಯಿಯ ನಿರ್ಬಂಧದ ಮಾತನ್ನು ಕೇಳಿ:—“ಇದು ತಾಯಿಯ ನಿರ್ಬಂಧ ಮಾತ್ರವಲ್ಲ. ತಂದೆಯದೂ ಸೇರಿದೆ.” ಎಂದು ತಿಳಿದುಕೊಂಡೆನು. ಬಹಳಸಾರೆ ವಿವಾಹಪ್ರಯತ್ನಕ್ಕೆ ನಾನು ಅಡ್ಡಿ ಮಾಡಿದ್ದರಿಂದ ತಂದೆಯು

ಮನಸ್ಸಿನಲ್ಲಿ ಅಸಂತೋಷವು ಒಡಮೂಡಿರುವದನ್ನು ಅರಿತಿದ್ದೆನು. ನಾನು ಆಲೋಚಿಸಿ, 'ಇನ್ನು ನನ್ನ ಹಟವು ಶೋಭಿಸಲಾರದು' ಎಂದು ತಾಯಿಗೆ ಹೇಳಿದೆನು: "ಅಮ್ಮಾ, ಸೊಸೆಯ ಮುಖ ನೋಡಬೇಕೆಂದು ನಿನಗಿಷ್ಟು ಪ್ರಬಲವಾದ ಆಶೆಯಿದ್ದರೆ ನನ್ನದೇನೂ ಅಡ್ಡಿಯಿಲ್ಲ."

ಅನಂತರ ನನ್ನ ವಿವಾಹ ಪ್ರಯತ್ನವು ಬಹಿರಂಗವಾಗಿ ತ್ವರಿತದಿಂದ ಜರುಗಲಾರಂಭವಾಯಿತು. ತ್ವರೆಗೊಂದು ಕಾರಣವಿದ್ದಿತು. ಜೊಯಿಸರು ಹೇಳಿದ್ದರು: "ವಿವಾಹ ಮಾಡುತ್ತಿದ್ದರೆ ಇದೇ ತಿಂಗಳಲ್ಲಿಯೇ ಮಾಡಬೇಕು. ಈ ತಿಂಗಳಲ್ಲಿ ತಪ್ಪಿಹೋದರೆ ಇನ್ನೊಂದು ವರ್ಷದವರೆಗೆ ವಿವಾಹ ಮುಹೂರ್ತವು ಸಿಗಲಾರದು ಬರುವ ವರ್ಷ ಇದೇ ತಿಂಗಳಲ್ಲಿಯೇ ಮುಹೂರ್ತವಿದೆ."

ನನ್ನ ತಾಯಿಗೆ ಒಂದು ವರ್ಷದವರೆಗೆ ವಿಲಂಬಿಸಲಿಷ್ಟವಿರಲಿಲ್ಲ. ನನ್ನ ತಂದೆಯು ಜಮೀನುದಾರನು; ನಾನು ತಿಂಗಳಿಗೆ ಐನೂರು ರೂಪಾಯಿ ಸಂಬಳವಿರುವ, ಸುಶಿಕ್ಷಿತ, ಸುಂದರ ತರುಣನು. ಹೀಗಿರಲು ವಿವಾಹ ಪ್ರಯತ್ನಕ್ಕೆ ಯಾವ ತರಹದ ತಡೆಯೂ ಇರಲಿಲ್ಲ. ಬಹಳ ಕಡೆಯಲ್ಲಿ ಹುಡುಕಿ, ವಿಚಾರಿಸಿ, ಪರೀಕ್ಷಿಸಿ, ಮೂರು ಉಪವರ ಕನ್ಯೆಯರನ್ನು ಆರಿಸಿ, ಅವರ ಜಾತಕಗಳನ್ನು ತರಿಸಲಾಯಿತು. ಆ ಮೂವರೂ ವಿದ್ಯಾವತಿಯರಾಗಿಯೂ, ಸುಂದರಿಯರಾಗಿಯೂ, ಸುಶೀಲೆಯರಾಗಿಯೂ ಇರುತ್ತಾರೆಂದು ಪುರೋಹಿತರ ಮೂಲಕವಾಗಿ ತಿಳಿಯಿತು. ಮೂವರೊಳಗೆ ಯಾರೊಡನೆ ವಿವಾಹವಾಗಬೇಕೆಂಬ ನಿರ್ಣಯವು ಜಾತಕ ನೋಡುವ ಜೊಯಿಸರ ಕೈಯಲ್ಲಿತ್ತು. ವಿವಾಹಕ್ಕೆ ಬೇಕಾದ ಸಾಮುಗ್ರಿಗಳು ತ್ವರೆಯಿಂದ ಸಜ್ಜಾಗುತ್ತಲಿದ್ದವು.

ನಾನು ಈಗಿನ ಕಾಲದ ನಾಗರಿಕ ಸ್ವತಂತ್ರ ಸ್ವಭಾವದವನೆಂದು ನಮ್ಮ ತಾಯಿಯು ಆ ಮೂವರು ಹುಡುಗಿಯರ ಫೋಟೋಗಳನ್ನು ತರಿಸಿಕೊಟ್ಟಳು. ನಾನೆಷ್ಟು ಸಾರೆ ನೋಡಿದರೂ ಅವರಲ್ಲಿ ಯಾರನ್ನು ವರಿಸಬೇಕೆಂದು ನಿಶ್ಚೈಸಲಾಗಲಿಲ್ಲ. ಇಂತಹ ಸುಳಿಯಲ್ಲಿ ಸಿಕ್ಕಿಬಿದ್ದು ಆಲೋಚಿಸಿದೆನು.

ಈ ಆಲೋಚನೆಯಲ್ಲಿ ನಾನಿರುವಾಗಲೇ ನನ್ನ ಸ್ನೇಹಿತನಾದ ರಾಮಚಂದ್ರನು ಆ ತ್ರಿಕಾಲದರ್ಶಿಯಾದ ಮಹಾತ್ಮನ ವೃತ್ತಾಂತವನ್ನು ಹೇಳಿದನು. "ರಾಮಚಂದ್ರನೊಡನೆ ಆ ಸಾಧುವಿನ ಹತ್ತಿರಕ್ಕೆ ಹೋಗುವದನ್ನೇನೋ ಪ್ರತಿಜ್ಞೆ ಮಾಡಿಯಾಯಿತು; ಆದರೆ ಆ ಮಹಾತ್ಮನ ಪಾಂಡಿತ್ಯವೂ ತ್ರಿಕಾಲದರ್ಶಿತ್ವವೂ ಸುಳ್ಳಾಗುವಂತೆ ಮಾಡಲು ಎಂತಹ ಪ್ರಶ್ನೆಯನ್ನು ಕೇಳಬೇಕು? ಆಗಲಿ. ಇದನ್ನೇ ಮುಂದಿಡುವೆನು." ಎಂದು ನಿರ್ಧರಿಸಿದೆನು.

———

೩

ಸಂಜೆ ಸುಮಾರು ಏಳು ಗಂಟೆಗೆ ನಾನು ರಾಮಚಂದ್ರನ ಮನೆಯನ್ನು ಸೇರಿದೆನು. ಆತನೂ ಅಲ್ಲಿಗೆ ಹೊರಡಲು ಸಿದ್ಧನಾಗಿಯೇ ಇದ್ದನು. ನನ್ನನ್ನು ಕಂಡೊಡನೆ:—"ಏನೋ ಮಧುರ, ಬಂದುಬಿಟ್ಟೆಯಾ? ಮಹಾತ್ಮನ ಮುಂದಿಡುವ ಪ್ರಶ್ನೆಯನ್ನು ಆಲೋಚನೆ ಮಾಡಿಕೊಂಡಿರುವೆಯಾ?" ಎಂದನು.

ನಾನು ಹೇಳಿದೆನು:—"ಓಹೋ! ಏನು ಕೇಳಬೇಕೆಂಬದನ್ನು ನಿರ್ಧರಿಸಿರುವೆನು; ಆದರೆ ಅದನ್ನೀಗ ನಿನಗೆ ಹೇಳಲಾರೆ. ಮಹಾತ್ಮನೆದುರಿನಲ್ಲಿಯೇ ಹೇಳುವೆನು."

ಆ ಮೇಲೆ ನಾವಿಬ್ಬರೂ ಗಂಗೆಯ ದಡಕ್ಕೆ ಹೋದೆವು ಆಗ ಅಲ್ಲಿ ತುಂಬಾ ತಣ್ಣಗಿರುವ ಗಾಳಿಯು ಬೀಸುತ್ತಿದ್ದು ಕೈಕಾಲುಗಳನ್ನು ಕೊರೆಯುವಂತಿತ್ತು. ನಾನಾಗ ಮನದಲ್ಲಿ ಹೀಗೆಂದು ಯೋಚಿಸಿದೆನು:—"ಈ ಸಾಧುವು ಇಂತಹ ಚಳಿಗಾಲದಲ್ಲಿ ಗಂಗೆಯ ದಡದಲ್ಲಿ ವಾಸಮಾಡುತ್ತಾನೆ. ಚಳಿಯಾಗದೆ ಇರುವದಕ್ಕಾಗಿ ಈತನ ಹತ್ತಿರ ಕಂಬಳಿ ಗಿಂಬಳಿ ಏನಾದರೂ ಇದ್ದೇ ಇರಬೇಕು; ಹಾಗಿಲ್ಲದಿದ್ದರೆ ಈತನು ಚಳಿಯನ್ನು ಹೇಗೆ ಸಹಿಸುವನು? ಇಂತಹ ಪ್ರಚಂಡ ಶೀತಕಾಲದಲ್ಲಿ ಇಲ್ಲಿಯೇಕೆ ವಾಸ ಮಾಡುವನು? ಇವನಿಗೆ ಚಳಿಯೆಂಬುದೇ ಇಲ್ಲವೆ? ಅಥವಾ ಹೀಗೆ ಆಚರಿಸಿದರೆ, ಜನಗಳ ಮನಸ್ಸಿನಲ್ಲಿ 'ಈ ಸಾಧುವು ಚಳಿ-ಮಳೆ-ಗಾಳಿ-ಬಿಸಿಲನ್ನು-ಎಲ್ಲವನ್ನೂ ಸಹಿಸಬಲ್ಲನೆಂದು ನಂಬಿಕೆಯುಂಟಾದೀತು' ಎಂದು ಇವನ ಅಭಿಪ್ರಾಯವಿರಬಹುದು."

ಸಾಧುವಿನ ಗುಡಸಿಲನ್ನು ಸಮೀಪಿಸಿ ನಾವಿಬ್ಬರೂ ಕ್ಷಣಕಾಲ ಅಲ್ಲಿಯೇ ನಿಂತೆವು. ಹತ್ತಿರದಲ್ಲಿ ಯಾರೂ ಕಾಣಿಸಲಿಲ್ಲ. ಸ್ಥಳವು ಪ್ರಶಾಂತವಾಗಿದ್ದಿತು. ಹಗಲಿನಲ್ಲಿ ಅಷ್ಟೊಂದು ಜನರ ಗಲಾಟೆಯಿರುವ ಸ್ಥಳದಲ್ಲಿ ರಾತ್ರಿಯಲ್ಲೀಗ ಅಷ್ಟು ಪ್ರಶಾಂತವಾಗಿರುವದನ್ನು ಕಂಡು ಆಶ್ಚರ್ಯವಾಯಿತು. ಆದರೆ ಕ್ಷಣದೊಳಗೇ ನೆನಪಾಯಿತು; ಏನೆಂದರೆ, ಸಂಜೆಯಾದ ಮೇಲೆ ಸಾಧುವು ಯಾರೊಡನೆಯೂ ಸೇರುವುದೂ ಇಲ್ಲ; ಮಾತನಾಡುವದೂ ಇಲ್ಲ. ಪ್ರಾಯಶಃ ಎಲ್ಲ ಸಾಧುಗಳೂ ಈ ನಿಯಮವನ್ನು ಇಟ್ಟಿರುತ್ತಾರೆ. ಆದುದರಿಂದಲೇ ಇಲ್ಲೀಗ ಯಾರೂ ಕಾಣಿಸುವದಿಲ್ಲ.

ಸಾಧುವಿನ ಗುಡಸಿಲು ಸಾಧಾರಣ ಸ್ಥಿತಿಯಲ್ಲಿದ್ದಿತು. ರಾಮಚಂದ್ರನು (ಬಾಗಿಲವನ್ನು ಮೆಲ್ಲನೆ ತಟ್ಟಿ): "ಸ್ವಾಮಿ, ನಾವಿಬ್ಬರು ದರ್ಶನಕ್ಕೆ ಬಂದಿದ್ದೇವೆ" ಎಂದನು.

ಒಡನೆ ಹೀಗೆಂದು ಉತ್ತರವು ಬಂದಿತು:—"ಬನ್ನಿ; ಒಳಗೆ ಬನ್ನಿ."

ಬಾಗಿಲವನ್ನು ತೆರೆದು ನಾವಿಬ್ಬರೂ ಒಳಹೊಕ್ಕೆವು. ರಾಮಚಂದ್ರನು ಭಕ್ತಿಪೂರ್ವಕವಾಗಿ ಸಾಧುವಿಗೆ ವಂದಿಸಿದನು ನಾನಾದರೋ ರಾಮಚಂದ್ರನ ಮನಸ್ಸಂತೋಷಕ್ಕಾಗಿ ವಂದಿಸಿದಂತೆ ಮಾಡಿದೆನು. ಮಹಾತ್ಮನು ಕೈಯೆತ್ತಿ ಮಂಗಳಾಶೀರ್ವಾದವನ್ನು ಮಾಡಿ ಕುಳಿತುಕೊಳ್ಳಲು ಸೂಚಿಸಿದನು. ನಾವು ಕುಳಿತುಕೊಂಡೆವು. ನಾನು ಸುತ್ತಲೂ ದೃಷ್ಟಿಯನ್ನು ಪಸರಿಸಿ ನೋಡಿದೆನು. ಐದಾರು ಜನರು ಮಾತ್ರ ಕುಳಿತುಕೊಳ್ಳುವಷ್ಟು ವಿಸ್ತಾರವಾಗಿದ್ದಿತು ಆ ಗುಡಸಿಲು. ಮೇಲ್ಭಾಗವು ಎಲೆಗಳಿಂದ ಮುಚ್ಚಿದ್ದಿತು. ಪೂರ್ವದಿಕ್ಕಿನಲ್ಲೊಂದು ಕಿಡಿಕಿ ಇತ್ತು.

ಕಿಡಿಕಿಯ ಹತ್ತಿರವೇ ಸಾಧುವು ಕುಳಿತಿದ್ದನು. ಆತನ ಮುಂದುಗಡೆಯಲ್ಲೇ ಅಗ್ನಿಕುಂಡ ಒಳಭಾಗದಲ್ಲಿ ಒಂದು ಸಣ್ಣ ಕಾಲುಮಣೆ ಇದ್ದು, ಅದರ ಮೇಲೊಂದು ಪುಸ್ತಕವಿದ್ದಿತು.

ನಾನು ಸೂಕ್ಷ್ಮ ದೃಷ್ಟಿಯಿಂದ ಸಾಧುವಿನ ದೇಹವನ್ನು ನೋಡಿದೆನು. ವಯಸ್ಸು ಅರವತ್ತು ವರ್ಷಕ್ಕಿಂತಲೂ ಹೆಚ್ಚಾಗಿದೆಯೆಂದು ತೋರಹತ್ತಿತು. ತಲೆಗೂದಲೆಲ್ಲ ಮುಪ್ಪಿನಿಂದ ಬಿಳುಪಾಗಿದ್ದುವು. ಬಿಳೀ ಗಡ್ಡವು ನಾಭಿಯವರೆಗೂ ಜೋತಾಡುತ್ತಿತ್ತು. ಆಕೃತಿಯು ಗಂಭೀರವಾಗಿಯೂ, ಪ್ರಶಾಂತವಾಗಿಯೂ ತೋರುತಲಿತ್ತು. ದೇಹವು ಸಂಸಾರದ ಸುಖ-ದುಃಖಾದಿಗಳಿಗೆ ಹೊರಗಾದುದೆಂದು ತೋರುತ್ತಿದ್ದಿತು. ಕಣ್ಣುಗಳಲ್ಲಿ ಮಿಂಚಿನಂತಿರುವ ತೇಜಸ್ಸು ಹೊರಹೊಮ್ಮುತ್ತಿತ್ತು. ಆದರಿಂದ ಕ್ಷಣಕಾಲ ನಾನು ಆಶ್ಚರ್ಯಾನ್ವಿತನಾಗಿ ಯೋಚಿಸಿದೆನೇನೆಂದರೆ, "ಈ ಕಣ್ಣಿನ ನೋಟವು ಯಾವ ಮನುಷ್ಯನ ಮೇಲೆ ಬೀಳುವದೋ, ಆ ಮನುಷ್ಯನ ಹೃದಯದಲ್ಲಿ ಎಷ್ಟೋ ರಹಸ್ಯವಾದ ವಿಚಾರವಿದ್ದರೂ ಅದನ್ನೀ ಕಣ್ಣುಗಳು ಕಂಡುಹಿಡಿಯಬಲ್ಲವು"

ನನಗೆ ಹೆಚ್ಚಾಗಿ ಆಲೋಚಿಸಲು ಅವಕಾಶವೇ ಇರಲಿಲ್ಲ ಕುಳಿತೊಡನೆ ನನ್ನನ್ನು ಕಂಡು ಸಾಧುವು ರಾಮಚಂದ್ರನನ್ನು ಕೇಳಿದನು:— "ನಿನ್ನೊಡನೆ ಬಂದಿರುವನಿವನು ಯಾರು?" ಎಂದು.

ರಾಮಚಂದ್ರನಂದನು:-"ಸ್ವಾಮೀ, ಇವನು ನನ್ನ ಸ್ನೇಹಿತನು ಮಧುರಮೋಹನನೆಂದಿವನ ಹೆಸರು. ತಮ್ಮ ಪ್ರಸಿದ್ಧಿ ಕೇಳಿ ಭೇಟಿಗೆ ಬಂದಿದ್ದಾನೆ."

ಆಗ ನಾನು ವಂದಿಸಿ ಹೇಳಿದೆನು:—"ಶೀಘ್ರದಲ್ಲಿಯೇ ಮಹಾತ್ಮರಿಲ್ಲಿಂದ ಬೇರೆ ಕಡೆಗೆ ಹೊರಟು ಹೋಗುವರೆಂದು ಕೇಳಿದೆನು. ಅದಕ್ಕೋಸ್ಕರ ಅವರ ದರ್ಶನದಿಂದ ನನ್ನ ಕಣ್ಣುಗಳನ್ನು ಪಾವನವನ್ನಾಗಿ ಮಾಡಿಕೊಳ್ಳೋಣವೆಂದು ಬಂದೆನು."

ಆ ಸಾಧುವಿನ ಮನಸ್ಸಿನಲ್ಲಿ ನನ್ನ ವಿಷಯವಾಗಿ ವಿಪರೀತ ಬುದ್ಧಿಯು ಹುಟ್ಟಬಾರದೆಂದೂ, ಆದರವನ್ನು ತೋರಿಸಿದಂತೆ ಆಗಲೆಂದೂ ನಾನು ಆ ರೀತಿಯಾಗಿ ಕೆಲವು ಶಬ್ದಗಳನ್ನು ಉಚ್ಚರಿಸಿದೆನು; ಆದರೆ ನನ್ನ ಮಾತಿನಿಂದ ಸಾಧುವು ಸ್ವಲ್ಪವೂ ವ್ಯತ್ಯಾಸ ಹೊಂದದೆ, ಮೊದಲಿನಂತೆಯೇ ಗಂಭೀರನಾಗಿಯೂ ಪ್ರಶಾಂತಚಿತ್ತನಾಗಿಯೂ ಇರುವನೆಂದು ತೋರಿತು.

ಸಾಧುವು ಹೇಳಿದನು:—"ಈ ಗುಡಸಿಲಿಗೆ ಬಂದು ಪಾವನಗೊಳಿಸುವದು ನಿಮ್ಮಂತಹ ವಿದ್ವಾಂಸರ ಅನುಗ್ರಹವೆಂದೇ ನಾನು ಭಾವಿಸಿರುತ್ತೇನೆ. ನಿಮಗೀಗ ಯಾವ ಸೇವೆಯನ್ನು ನಾನು ಮಾಡಬೇಕೆಂಬದನ್ನು ಹೇಳಿರಿ."

ನಾವು ಬಂದಿರುವುದು ಸಾಧುವಿನ ಮನಸ್ಸಿಗೆ ಒಪ್ಪಿಗೆ ಇಲ್ಲದಿರಬಹುದು. ಆದ್ದರಿಂದ ಏನೋ ಸ್ವಲ್ಪ ಮಾತನಾಡಿ ನಮ್ಮನ್ನು ಬೇಗನೆ ಕಳುಹಿಸಲಿಚ್ಛಿಸಿದನು. ವ್ಯರ್ಥವಾದ ಮಾತಿನ ಆಡಂಬರವು ಆತನಿಗೆ ರುಚಿಸದು. ಸಾಮಾನ್ಯವಾಗಿ ಸಂಸಾರದಲ್ಲಿ ವೈರಾಗ್ಯವುಂಟಾಗಿರುವ ಸಾಧುಗಳ ಸ್ವಭಾವವು ಹೀಗೆಯೇ ಸರಿ. ನಾನು ಆಲೋಚಿಸಿದೆನು:—"ಹೀಗಿದ್ದರೆ ವ್ಯರ್ಥವಾದ ಮಾತಿನ ಆಡಂಬರವೇಕೆ? ನಮ್ಮ ಪ್ರಯೋಜನವನ್ನು ಸಾಧಿಸಿಕೊಳ್ಳಬೇಕು. ಇಲ್ಲಿ ಪರೀಕ್ಷಿಸಬೇಕಾದುದು ಇಷ್ಟೇ-ಈತನು ನಿಜವಾದ ಮಹಾತ್ಮನೇ ಅಥವಾ ಕಾವೀ ವಸ್ತ್ರವನ್ನು ಹೊದ್ದಿರುವ ಯಾವನೋ ಒಬ್ಬ ಮೋಸಗಾರನೇ? ಎಂದು ತಿಳಿಯಬೇಕಾದ್ದನ್ನು ತಿಳಿದು ನಾವಿಲ್ಲಿಂದ ಹೊರಡಬೇಕು. ವ್ಯರ್ಥವಾಗಿ ನಾವಾದರೂ ಏಕೆ ಕಾಲಕ್ಷೇಪ ಮಾಡಬೇಕು?"

ನಾನು ಅವರನ್ನು ನಮಸ್ಕರಿಸಿ ಅಂಜಲಿಬದ್ಧನಾಗಿ ಹೇಳಿದೆನು:—"ಪೂಜ್ಯರೇ, ನಾನಿಲ್ಲಿಗೆ ಬಂದಿರುವುದರ ಕಾರಣವು ಬಹಳ ಕ್ಷುದ್ರ ಮತ್ತು ಸ್ವಾರ್ಥಪೂರ್ಣವಾದುದು. ನಾನು ಕೇಳಿದ್ದೆನು:-'ಪೂಜ್ಯರಿಲ್ಲಿಗೆ ಬಂದಂದಿನಿಂದ ಬಹಳ ಜನರ ಇಷ್ಟಾರ್ಥಗಳು ಪೂರ್ಣವಾದವು; ಅತಿ ಕಠಿಣವಾದ ಸಂದೇಹಗಳೂ ಹೋಗಲಾಡಿಸಲ್ಪಟ್ಟವು,' ಎಂದು. ಆದ್ದರಿಂದ ನನ್ನ ಮನದಲ್ಲಿಯೂ ಆಶೆ ಹುಟ್ಟಿತು. 'ನಾನೂ ಪೂಜ್ಯರ ಹತ್ತಿರ ಹೋಗಿ ನನ್ನ ಕೆಲವು ಭವಿಷ್ಯತ್ಕಾಲದ ಸಂಗತಿಗಳನ್ನು ತಿಳಿದುಕೊಳ್ಳುವದಕ್ಕಾಗಿ ಎರಡು-ಮೂರು ಪ್ರಶ್ನೆಗಳನ್ನು ಕೇಳಿ, ಪೂಜ್ಯರಿಂದವುಗಳ ಉತ್ತರವನ್ನು ಪಡೆಯಬೇಕು,' ಎಂದು. ಪೂಜ್ಯರು ಅದಕ್ಕೆ ಒಪ್ಪಿದರೆ...."

ಸಾಧುವಿನ ಮುಖದಲ್ಲಿ ಸ್ವಲ್ಪವೂ ವ್ಯತ್ಯಾಸವುಂಟಾಗಲಿಲ್ಲ. ಸಾಧುವು ಹೇಳಿದನು:—"ಮಗೂ, ನೀನೇನನ್ನೋ ಹೇಳಿದೆಯಲ್ಲವೇ? 'ಬಹಳ ಜನರ ಇಷ್ಟಾರ್ಥಗಳು ಪೂರ್ಣವಾದವು' ಎಂದು ಅದೆಲ್ಲ ಸುಳ್ಳು. ನನ್ನಲ್ಲಂತಹ

ಅಲೌಕಿಕವಾದ ಸಾಮರ್ಥ್ಯವಿರುವದೆಂದು ತಿಳಿಯಲಾರೆನು. ಹಾಗೆ ಇದ್ದಿದ್ದರೆ ಜನಗಳ ಇಷ್ಟಾರ್ಥಗಳನ್ನು ಪೂರ್ಣ ಮಾಡುವದು ನಿಜವಾಗಿದ್ದಿತು. ಕಷ್ಟಕ್ಕೆ ಸಿಲುಕಿದವರನ್ನು ನೋಡಿ ನಾನು ತುಂಬಾ ವ್ಯಥೆಪಡುತ್ತೇನೆ; ವ್ಯಾಕುಲನಾಗಿ ಪರಮೇಶ್ವರನನ್ನು ಪ್ರಾರ್ಥಿಸುತ್ತೇನೆ:—'ಕರುಣಾನಿಧೆ! ಭಗವನ್! ಹರೆ! ಕಷ್ಟಕ್ಕೆ ಸಿಲುಕಿದವರನ್ನು ಬೇಗನೆ ಬಂದು ಬಿಡಿಸು' ಎಂದು.'

"ನನ್ನ ಈ ಪ್ರಾರ್ಥನೆಯನ್ನು ಈಶ್ವರನು ಕೇಳುವನೋ ಇಲ್ಲವೋ? ಕಷ್ಟಕ್ಕೆ ಸಿಲುಕಿದವರ ಕಷ್ಟವು ನಾಶವಾಯಿತೇ, ಇಲ್ಲವೇ? ಎಂಬುದಾವುದನ್ನೂ ನಾನು ಯೋಚಿಸುವದಿಲ್ಲ. ಹಾಗೆ ಯೋಚಿಸಲು ನನಗಧಿಕಾರವಿಲ್ಲವೆಂದೇ ನನ್ನ ಅಭಿಪ್ರಾಯ. ಭವಿಷ್ಯತ್ಕಾಲದ ಸಂಗತಿಗಳ ವಿಚಾರವಾಗಿ ಹೇಳಿದೆ ಯಷ್ಟೆ? ಅಂತಹ ಭವಿಷ್ಯತ್ಕಾಲದ ಸಂಗತಿಗಳನ್ನು ತಿಳಿದುಕೊಳ್ಳಲು ಮಾಡುವ ಪ್ರಯತ್ನವು ಮಾತ್ರ ನನ್ನ ಅಧೀನ. ನಿಮ್ಮಂತಹ ಸಂಸಾರಿ ಜನರ ಸ್ಥಿತಿ ಗಿಂತಲೂ ನನ್ನ ಸ್ಥಿತಿಯಲ್ಲಿ ಇದೇ ಸ್ವಲ್ಪ ವಿಶೇಷವೆಂಬುದು."

ಸಾಧುವು ಮಾತನಾಡುತ್ತಿರುವಾಗ ಅಲ್ಲಲ್ಲಿ ಮಧ್ಯೆ ಸ್ವಲ್ಪ ನಿಲ್ಲಿಸಿ ನಿಲ್ಲಿಸಿ ಹೇಳುತ್ತಿದ್ದನು ನಾವಿಬ್ಬರೂ ಆತನ ಮಾತಿಗೆ ಕಿವಿಗೊಡುವೆವೋ ಇಲ್ಲವೋ ಎಂಬದನ್ನು ತಿಳಯುುವದಕ್ಕಾಗಿಯೇ ಹಾಗೆ ಮಾಡುತ್ತಿರಬಹುದು. ತಾನು ಕಡೆಗಣ್ಣಿನಿಂದ ರಾಮಚಂದ್ರನನ್ನು ನೋಡಿದನು. ಆತನು ಏಕಾಗ್ರತೆಯಿಂದ ಮಹಾತ್ಮನ ಮಾತನ್ನು ಕೇಳುತ್ತಿದ್ದನು ನಾನೂ ಕೂಡ ಸಾಧುವಿನ ಮಾತನ್ನು ಕೇಳುವುದರಲ್ಲಿ ಏಕಾಗ್ರತೆಯನ್ನು ನಟಿಸುತ್ತಿದ್ದೆನು.

ತಿರುಗಿ ಮಹಾತ್ಮನು ಹೇಳುತ್ತಿದ್ದನು: "ನೋಡಿರಿ. ಇದು ಬಹಳ ದೊಡ್ಡ ವಿಷಯ. ಆದರೂ ಕೆಲವೇ ಮಾತುಗಳಿಂದ ನನ್ನ ಅಭಿಪ್ರಾಯ ವನ್ನು ತಿಳಿಸುತ್ತೇನೆ. ಹೆಚ್ಚಿಗೆ ವಿವರಿಸಲು ನನಗೂ ಅವಕಾಶವಿಲ್ಲ; ನಿಮ್ಮಿಬ್ಬ ರಿಗೂ ಇಲ್ಲ."

ಯಾರು ಸಂಸಾರದಲ್ಲಿ ಆಸಕ್ತರಾಗಿರುತ್ತಾರೋ ಅವರಿಗೇ ಸಂಸಾರವು ದುಃಖಸಾಗರವಾಗಿದೆ. ನಾನಾ ವಿಧವಾದ ಅಭಿಲಾಷೆಗಳಿಗೆ, ಭಾವನೆಗಳಿಗೆ, ಸ್ವಾರ್ಥಗಳಿಗೆ ಈ ಸಂಸಾರವು ಯುದ್ಧರಂಗವೇ ಆಗಿದೆ. ಎಲ್ಲರೂ ತಮ್ಮ ತಮ್ಮೊಳಗೇ ವೈರ ಕಟ್ಟಿಕೊಂಡು ತಮ್ಮ ತಮ್ಮ ಅಭಿಲಾಷೆಗಳನ್ನು ಪೂರೈಸಿ ಕೊಳ್ಳಲು ಹವಣಿಸುತ್ತಾರೆ. 'ಈ ವಸ್ತುವು ನನಗೆ ದೊರೆಯುಬೇಕು; ನನ್ನ ಇಚ್ಛೆಯೇ ಪೂರ್ಣವಾಗಬೇಕು' ಎಂದು; ಆದರೆ ಆದರಲ್ಲಿ ಬೇರೆಯುವರಿಗೆಷ್ಟು ತೊ... ...ಚಿಸುವದಿಲ್ಲ. ಆದ್ದರಿಂದಲೇ ಪರ ಸ... ...ಲೋಭ, ಮೋಹ, ಕ್ರೋಧ,

ಮದ, ಮಾತ್ಸರ್ಯ ರೂಪವಾದ ತೆರೆಯು ಎಲ್ಲರ ಕಣ್ಣನ್ನೂ ಕಟ್ಟಿರುತ್ತದೆ. ಆದ್ದರಿಂದಲೇ ತಿಳಿದಿದ್ದರೂ ಕೂಡ ಯಾರೂ ಸ್ವಾರ್ಥವನ್ನು ದೂರಮಾಡಿ ಶಾಂತವಾದ ಮನಸ್ಸಿನಿಂದ ಯಾವ ವಿಷಯವನ್ನೂ ವಿವೇಚಿಸಲು ಶಕ್ತರಾಗುವದಿಲ್ಲ. ಈ ಕಾರಣದಿಂದಲೇ ಸಂಸಾರಿ ಮನುಷ್ಯನು ಭವಿಷ್ಯತ್ಕಾಲದ ನಿಜವಾದ ಸಂಗತಿಯನ್ನು ತಿಳಿಯಲಾರದವನಾಗಿರುತ್ತಾನೆ. ಸಂಸಾರಿ ಜನರೊಳಗೆ ಯಾವನಾದರೊಬ್ಬನು ವಿವೇಕಿಯಾಗಿ ಮನಸ್ಸಿನ ದುರಾಲೋಚನೆಗಳನ್ನೆಲ್ಲಾ ದೂರ ಓಡಿಸಿ, ಸ್ವಾರ್ಥವನ್ನು ಅರಿಯಲು ಪ್ರಯತ್ನಿಸಿದ್ದೇ ಆದರೆ, ಆ ಮನುಷ್ಯನು ಅದನ್ನು ತಿಳಿಯುವುದರಲ್ಲಿ ಯಾವ ಪ್ರತಿಬಂಧಕವೂ ಇಲ್ಲ. ಖಂಡಿತವಾಗಿಯೂ ಅಂತಹ ಮನುಷ್ಯನು ಭವಿಷ್ಯತ್ಕಾಲದ ಸಂಗತಿಯನ್ನಷ್ಟೇ ಅಲ್ಲದೆ ಸಕಲವನ್ನೂ ತಿಳಿದೇ ತಿಳಿಯುವನು. ಸಂಸಾರಿ ಜನರಿಗಿಂತಲೂ ನಮ್ಮಂತವರ ಸ್ಥಿತಿಯು ಬಹಳ ವಿಪರೀತವಾದುದು. ಯಾರಿಗಾದರೂ ಒಳ್ಳೆಯದಾದರೂ ಕೆಟ್ಟದ್ದಾದರೂ ನಮಗೆ ಯಾವ ಪ್ರಯೋಜನವೂ ಇಲ್ಲ. ಯಾರಾದರೂ ಪ್ರಸನ್ನರಾಗಿದ್ದರೆ ನಮಗದರಿಂದ ಸುಖವೂ ಇಲ್ಲ; ಅಥವಾ ಸಿಟ್ಟಾಗಿದ್ದರೆ ನಮಗದರಿಂದ ದುಃಖವೂ ಇಲ್ಲ. ಸಂಸಾರದಲ್ಲಿ ಯಾವ ಇಚ್ಛೆಯೂ ನಮಗಿಲ್ಲ. ಯಾವುದರಲ್ಲಿಯೂ ನಾವು ಆಸಕ್ತರಾಗಿಲ್ಲ. ನಮ್ಮ ವಿವೇಕಕ್ಕೆ ಯಾವ ಕುಂದು-ಕೊರತೆಗಳೂ ಇಲ್ಲ. ಆದುದರಿಂದ ಭವಿಷ್ಯತ್ಕಾಲದ ನಿಜವಾದ ಸಂಗತಿಗಳನ್ನರಿಯುವದು ನಮಗೇನೂ ಕಷ್ಟವಿಲ್ಲ. ನಮಗೂ ನಿಮಗೂ ಏನಾದರೂ ವ್ಯತ್ಯಾಸವಿರುವದಾದರೆ ಅದೇ ಇದು. ಇರಲಿ. ಯಾವ ಭವಿಷ್ಯತ್ಕಾಲದ ಸಂಗತಿಯನ್ನರಿಯಬೇಕೆಂದಿರುವೆ ನೀನು? ನಾನದನ್ನು ಹೇಳಲು ಶಕ್ತನಾದರೆ ನಿಶ್ಚಯವಾಗಿಯೂ ಹೇಳುವೆನು. ಕೇಳು" ಹೀಗೆ ಹೇಳಿ ಸಾಧುವು ಸುಮ್ಮನಾದನು.

ರಾಮಚಂದ್ರನು ಸಾಭಿಪ್ರಾಯದಿಂದ ನನ್ನ ಕಡೆಗೆ ನೋಡಿದನು. ನಾನು ಆಲೋಚಿಸಿದೆನು: "ನಾನು ಕೇಳುವ ಪ್ರಶ್ನೆಯನ್ನು ಯಾವ ರೀತಿಯಾಗಿ ಸಾಧುವಿನೆದುರಿಗಿಡಲಿ? ಹೇಗೆ ಪ್ರಶ್ನೆ ಮಾಡಿದರೆ ಮಹಾತ್ಮನಿಗುತ್ತರ ಹೇಳಲು ಕಷ್ಟವಾದೀತು? ಮತ್ತು ಅವನ ವಾಸ್ತವಿಕವಾದ ಪಾಂಡಿತ್ಯವು ಹೊರಬಿದ್ದೀತು?" ಎಂದು.

ಮಹಾತ್ಮನ ಮೇಲಿನ ಭಾಷಣದಿಂದ ಆತನು ವಿಚಾರಶೀಲನೆಂದೂ, ವಿದ್ವಾಂಸನೆಂದೂ ತಿಳಿಯಿತು. ಆತನು ಹೇಳಿದುದು ಯುಕ್ತವಾದುದೆಂದೂ ತೋರಿತು. ಮೆಲ್ಲಮೆಲ್ಲನೆ ನನಗೂ ಕೂಡ ಆ ಮಹಾತ್ಮನಲ್ಲಿ ವಿಶ್ವಾಸವುಂಟಾಗಲಾರಂಭಿಸಿತು. ಆ ಮಹಾತ್ಮನು ಮೋಸಗಾರನೆಂಬುದನ್ನು ತೋರಿಸುವದ

ಕ್ಕಾಗಿಯೂ, ಆತನು ಸುಳ್ಳುಗಾರನೆಂದು ಸಿದ್ಧಪಡಿಸುವದಕ್ಕಾಗಿಯೂ, 'ಈ ಕಾಲದಲ್ಲಿ ಸರಿಯಾದ ಮಹಾತ್ಮರು ದೊರೆಯುವುದಸಾಧ್ಯವೆ'ಂದು ರಾಮ ಚಂದ್ರನ ಮನಸ್ಸಿನಲ್ಲಿ ನಾಟುವಂತೆ ಮಾಡುವುದಕ್ಕಾಗಿಯೂ ನಾನಲ್ಲಿಗೆ ಹೋಗಿದ್ದುದು. ಸಾಧುವಿನ ಭಾಷಣವನ್ನು ಕೇಳಿದ ಮಾತ್ರದಿಂದಲೇ ನನ ಗಾತನಲ್ಲಿ ನಂಬಿಕೆಯುಂಟಾಗುವುದು ನನ್ನ ಮೊದಲಿನ ಎಲ್ಲ ಇಚ್ಛೆಗಳಿಗೂ ಪ್ರತಿಕೂಲವಾಗಿದ್ದಿತು ನಾನೀ ರೀತಿಯಾಗಿ ಮನದೊಳಗೆ ವಿಚಾರ ಮಾಡುತ್ತಿ ರುವವನ್ನು ಕಂಡು ಮಹಾತ್ಮನು ಹೇಳಿದನು:—"ಮಗೂ, ನೋಡು. ನಾನಿ ಲ್ಲಿಗೆ ಬಂದು ಒಂದು ತಿಂಗಳಾಯಿತು. ಇಷ್ಟರೊಳಗೆ ಸಾವಿರಾರು ಜನರಿಲ್ಲಿಗೆ ಬಂದಿರಬಹುದು. ಅವರಲ್ಲಿ ಒಬ್ಬೊಬ್ಬನೂ ಬೇರೆ ಬೇರೆ ರೀತಿಯ ಅಭಿಲಾಷೆ ಯುಳ್ಳವನಾಗಿದ್ದನು. ಕೆಲವರು ಕಷ್ಟಕ್ಕೆ ಸಿಲುಕಿ, ಬಸವಳಿದು ಬೆಂಡಾಗಿರುವ ಹೃದಯವನ್ನು ಸಮಾಧಾನಪಡಿಸಿಕೊಳ್ಳಲು; ಕೆಲವರು ಕೇವಲ ನನ್ನನ್ನು ಪರೀಕ್ಷಿಸುವದಕ್ಕಾಗಿಯೇ ಬಂದಿದ್ದರು. ಅವರೊಳಗೆ ಯಾರ ಮೇಲೂ ಸಿಟ್ಟು ಮಾಡಲು, ಸಂತೋಷ ತೋರಿಸಲು ಕಾರಣವ್ಯಾವುದೂ ನನ್ನ ಹತ್ತಿರವಿರ ಲಿಲ್ಲ ಹುಟ್ಟಿದಂದಿನಿಂದ ಅವರ ಸ್ಥಿತಿ-ಗತಿಗಳನ್ನು ಕ್ಷಣಕಾಲದ ಸಹವಾಸದಿಂದ ತಿಳಿಯಲು ನಾನು ಸಮರ್ಥನಾಗಲಾರೆನು. ಯಾರು ಯಾರು ಯಾವ ಯಾವ ರೀತಿಯ ಅಭಿಪ್ರಾಯದಿಂದ ಬಂದಿದ್ದರೋ, ಅವರವರನ್ನು ಅದೇ ರೀತಿಯಲ್ಲಿ ಯೇ ನೋಡುತ್ತಿದ್ದೆನು. ವಿಚಾರ ಮಾಡಿ, ಮನಸ್ಸಿನಲ್ಲಿ ಏನು ತೋರಿತೋ ಅದನ್ನೇ ಜನರಿಗೆ ಹೇಳುತ್ತಿದ್ದೆನು. ಕೆಲವರು, 'ನಾನು ಸರಿಯಾಗಿ ತಿಳಿದ ವನು' ಎಂದು ತಿಳಿದಿರಬಹುದು. ಕೆಲವರು 'ನಾನು ಮೋಸಗಾರನು' ಎಂದು ತಿಳಿದಿರಬಹುದು. ನನ್ನ ದೃಷ್ಟಿಯಲ್ಲಿ ಅವರಿಬ್ಬರೂ ಸಮಾನರೇ ಇರುವರು. ಈಗ ನೀನೂ ಕೂಡ ನನ್ನನ್ನು ಪರೀಕ್ಷಿಸುವದಕ್ಕಾಗಿಯೇ ಬಂದಿರುವದಾದರೆ, ಅದನ್ನು ಸ್ಪಷ್ಟವಾಗಿ ಹೇಳಿಬಿಡು. ನನಗದರಲ್ಲಿ ಸ್ವಲ್ಪವೂ ಸಿಟ್ಟಿಲ್ಲ; ಮತ್ತು ನಿನಗೆ ನಿಜವಾದ ವಿಷಯದಲ್ಲಿ ಆಸಕ್ತಿಯಿರುವುದನ್ನು ನೋಡಿ ನಾನಿನ್ನೂ ಪ್ರಸನ್ನನಾಗುವೆನು. ನಿನ್ನ ಪ್ರಶ್ನೆಗಳಿಗೆ ದೊರೆತ ಉತ್ತರವನ್ನು ಹೇಳುತ್ತೇನೆ

ಸಾಧುವಿನ ಈ ನಿಜವಾದ ಮಾತುಗಳು ನನ್ನ ಹೃದಯದೊಳಗೆ ಪ್ರವೇಶಿ ಸುತ್ತಿದ್ದವು. ಮಹಾತ್ಮನು ಅಭಯವನ್ನು ಕೊಟ್ಟಿರುವನು-ಯಾರು ಯಾವ ಸ್ಥಿತಿಯಲ್ಲಿದ್ದರೂ ಕೂಡ ಪ್ರಶ್ನೆಗಳಿಗುತ್ತರವು ಸಿಗದೆ ಇರಲಾರದೆಂದು. ಹೀಗಿಷ್ಟು ಸ್ಪಷ್ಟವಾಗಿ ಹೇಳುತ್ತಿದ್ದರೂ ಮಾತ್ರ ಮನಸ್ಸಿನಲ್ಲಿರುವದನ್ನು ಗುಟ್ಟಾಗಿಡುವದೂ, ಸುಳ್ಳಾಡುವದೂ ಸರಿಯಾದುದಲ್ಲ.

ನಾನು ನಮ್ರತೆಯಿಂದ ಹೇಳಿದೆನು:—"ನಾನೊಂದು ಸಂಗತಿಯನ್ನು

ತಿಳಿಯಬೇಕೆಂದಿದ್ದೇನೆ. ಅದಕ್ಕೂ ನನ್ನ ಮುಂದಿನ ಜೀವನಕ್ಕೂ ಹೆಚ್ಚಾದ ಸಂಬಂಧವಿದೆ. ಪೂಜ್ಯರು ತಮ್ಮ ಸ್ಥಿರವಾದ ವಿಚಾರ ದೃಷ್ಟಿಯಿಂದ ಆ ವಿಷಯದಲ್ಲಿ ನಿಜವಾದ ಉತ್ತರವನ್ನು ದಯಪಾಲಿಸಿದರೆ ನಾನು ತುಂಬಾ ಕೃತಜ್ಞನಾಗುತ್ತೇನೆ. ಇದನ್ನೂ ಕೂಡ ನಾನು ಮುಚ್ಚಿಡುವುದಿಲ್ಲ. ಪೂಜ್ಯರು ನನ್ನ ಈ ಪ್ರಶ್ನೆಗಳಿಗುತ್ತರವನ್ನು ಕೊಡಲು ಶಕ್ತರಾಗುತ್ತಾರೋ ಇಲ್ಲವೋ ಎಂಬುದನ್ನೂ ನಾನು ಪರೀಕ್ಷಿಸಬೇಕೆಂದಿರುವೆನು. ಪರ್ಯವಸಾನದಲ್ಲಿ ಪೂಜ್ಯರು ನುಡಿದಂತೆಯೇ ಫಲವಾದರೆ: 'ಮಹಾತ್ಮರು ತ್ರಿಕಾಲ ದರ್ಶಿಗಳು' ಎಂಬ ವಿಷಯದಲ್ಲಿ ನನಗೆ ನಂಬಿಕೆಯುಂಟಾಗುವುದು. ನನ್ನ ಮನಸ್ಸಿನಲ್ಲಿರುವುದನ್ನು ಸ್ಪಷ್ಟವಾಗಿ ಹೇಳಿಬಿಟ್ಟಿರುವೆನು. ಈ ರೀತಿ ನಾನು ಹೇಳುತ್ತಿರುವಾಗ ತಿಳಿಯದೆ ಏನಾದರೂ ಧಾರ್ಷ್ಟ್ಯವನ್ನು ತೋರಿಸಿದ್ದರೆ ಪೂಜ್ಯರದನ್ನು ಕ್ಷಮಿಸಬೇಕು"

ಮಹಾತ್ಮನು ನಸುನಕ್ಕನು. ನಾನು ಅಲ್ಲಿಗೆ ಹೋದ ಮೊದಲ್ಗೊಂಡು ಅಷ್ಟು ಹೊತ್ತಿನವರೆಗೆ ನಿರ್ವಿಕಾರವಾಗಿದ್ದ ಮಹಾತ್ಮನ ಮುಖದಲ್ಲಿ ನಗುವುಂಟಾದುದು ಇದೇ ಮೊದಲನೆಯದು ಮಹಾತ್ಮನು ಹೇಳಿದನು: "ಮಗೂ, ಕಪಟವಿಲ್ಲದೆ ಮನಸ್ಸಿನಲ್ಲಿರುವದೆಲ್ಲವನ್ನೂ ನೀನು ಹೇಳಿದುದಕ್ಕಾಗಿ ಸಂತೋಷವಾಗಿದೆ. ಮನಸ್ಸಿನಲ್ಲಿರುವ ವಾಸ್ತವಿಕವಾದ ಸಂಗತಿಯನ್ನು ನೀನು ಮುಚ್ಚಿಡಲಿಲ್ಲ. ಸಂತೋಷ. ನನ್ನೀ ಏಕಾಂತ ಜೀವನದಲ್ಲಿ ಮನನ ಸಿಧಿಧ್ಯಾಸಗಳಿಂದ ಬ್ರಹ್ಮಸೃಷ್ಟಿಯ ಎಷ್ಟೋ ರಹಸ್ಯಗಳನ್ನು ತಿಳಿಯಬಲ್ಲೆನು. ಆದರೂ ಎಲ್ಲದರ ಮೇಲೂ ಇರುವ ಲೀಲಾಮಯವಾದ ಪರಮಾತ್ಮನ ಅದ್ಭುತವಾದ ಲೀಲೆಗಳಲ್ಲಿ ಮಾತ್ರ ನೂರರಲ್ಲೊಂದಂಶವನ್ನು ಕೂಡ ತಿಳಿಯಲಾರೆನು. ದೊಡ್ಡ ದೊಡ್ಡ ಸಿದ್ಧ ಪುರುಷರು ತಮ್ಮ ಇಚ್ಛಾಶಕ್ತಿಯ ಮಹಿಮೆಯಿಂದ ಮಾಡತಕ್ಕ ಕೆಲಸಗಳಲ್ಲಿ ಸ್ವಲ್ಪ ಮಾತ್ರ ನಾನು ತಿಳಿದಿರಬಹುದು. ಇಂತಹ ಎಲ್ಲಿಯೋ ಸ್ವಲ್ಪ ಮಟ್ಟಿನ ಶಕ್ತಿಯಿದೆ ಎಂದು ನಾನೆಂದಿಗೂ ಸಿದ್ಧನೆನಿಸಲಾರೆನು. ನಿನ್ನೆದುರಿನಲ್ಲಿ ಪರೀಕ್ಷಿಸಿಕೊಳ್ಳುವದಕ್ಕೂ ಕೂಡ ನನಗಧಿಕಾರವಿಲ್ಲ. ಬ್ರಹ್ಮನು ಮನುಷ್ಯರಿಗೆ ನೂರು ವರ್ಷಗಳ ವರೆಗಿನ ಆಯುಸ್ಸನ್ನು ಮಾತ್ರ ಕೊಟ್ಟಿರುವನು. ಅಷ್ಟು ಸ್ವಲ್ಪವಿರುವ ಆಯುಸ್ಸಿನಲ್ಲಿ ಮನುಷ್ಯನು ಪ್ರಕೃತಿಯ ರಹಸ್ಯವನ್ನು ತಿಳಿಯಲೆತ್ನಿಸಿದರೆ ಸ್ವಲ್ಪವಾದರೂ ತಿಳಿಯದಿರಲಾರದು. ನಿನ್ನ ಎರಡು ಪ್ರಶ್ನೆಗಳಿಗೆ ನಾನು ಉತ್ತರವನ್ನು ಕೊಡುತ್ತೇನೆ. ನನ್ನ ಈ ಉತ್ತರದಿಂದ ನಿನ್ನ ಭವಿಷ್ಯತ್ಕಾಲದ ಸಂಗತಿಯ ಗುಟ್ಟು ಸ್ವಲ್ಪವಾದರೂ ತಿಳಿದೀತು."

ನಾನು ಮಹಾತ್ಮನಿಗೆ ನಮಸ್ಕರಿಸಿ, ಜೇಬಿನಿಂದ ಮೂರು ಫೋಟೋಗಳನ್ನು ಹೊರತೆಗೆದು, ಸಾಧುವಿನೆದುರಿನಲ್ಲಿಟ್ಟು ಹೇಳಿದೆನು: "ಪೂಜ್ಯರೇ, ನೋಡೋಣಾಗಲಿ. ತಾವೆನಗೆ ತಂದೆಯ ಸಮಾನರು. ಆದ್ದರಿಂದ ತಮ್ಮೆದುರಿನಲ್ಲಿ ನಾನು ನಾಚುವದೂ, ಯಾವುದೊಂದು ಸಂಗತಿಯನ್ನು ಮುಚ್ಚಿಡುವದೂ ಉಚಿತವಲ್ಲ. ಶೀಘ್ರದಲ್ಲಿಯೇ ಇದೇ ತಿಂಗಳಲ್ಲಿ ನನಗೆ ವಿವಾಹವಾಗುವದು. ಮೂವರು ಹುಡುಗಿಯರನ್ನು ನನಗಾಗಿ ಆರಿಸಿರುವರು. ಈ ಮೂವರಲ್ಲಿ ಯಾರು ನನ್ನವಳೆಂಬ ನಿಶ್ಚಯವನ್ನು ಜೊಯಿಸರಿನ್ನೂ ಹೇಳಿಲ್ಲ. ನಾಳೆ ಬೆಳಿಗ್ಗೆ ಅದನ್ನವರು ಹೇಳುವರು. ಈಗ ಪೂಜ್ಯರೇ ಮೂರು ಫೋಟೋಗಳನ್ನು ನೋಡಿ ಇವರಲ್ಲಿ ಯಾವ ಹುಡುಗಿಯು ನನಗೆ ನಿಶ್ಚೈಸಲ್ಪಡುವಳು? ಎಂಬುದನ್ನು ಹೇಳೋಣಾಗಬೇಕು."

ಗುಡಿಸಿಲಿನ ಒಂದು ಪಕ್ಕದಲ್ಲಿ ಚಿಕ್ಕ ದೀಪವೊಂದು ಉರಿಯುತ್ತಲಿತ್ತು. ಅದರ ಬೆಳಕು ಗುಡಸಿಲಿನ ಕತ್ತಲೆಯನ್ನು ಮಾತ್ರ ಹೋಗಲಾಡಿಸುತ್ತಿತ್ತು. ನಾನಾ ದೀಪವನ್ನು ತಂದು ಮಹಾತ್ಮನೆದುರಿಗಿಟ್ಟೆನು. ಮಹಾತ್ಮನು ಆ ಫೋಟೋಗಳನ್ನು ಜಾಗರೂಕತೆಯಿಂದ ಪರೀಕ್ಷಿಸಿದನು. ನಾನು ಮೊದಲು ಯೋಚಿಸಿದ್ದೆನು:--"ಮಹಾತ್ಮನಿಗೆ ನಮ್ಮಂತೆ ನೋಡಲು ಕನ್ನಡಕವು ಬೇಕಾದೀತು" ಎಂದು; ಆದರೆ ನನ್ನೀ ಯೋಚನೆಯು ವ್ಯರ್ಥವಾಯಿತು. ಅಂತಹ ಸಾಮಾನ್ಯವಾದ ಮಂದ ಪ್ರಕಾಶದಲ್ಲಿಯೂ ಕೂಡ ಮಹಾತ್ಮನ ಕಣ್ಣುಗಳು ಆ ಫೋಟೋಗಳನ್ನೂ, ಅದರ ಕೆಳಭಾಗದಲ್ಲಿ ಸೂಕ್ಷ್ಮವಾದ ಅಕ್ಷರಗಳಿಂದ ಬರೆದಿರುವ ಹುಡುಗಿಯರ ಹೆಸರುಗಳನ್ನೂ ಸ್ಪಷ್ಟವಾಗಿ ತಿಳಿಯುವದರಲ್ಲಿ ಸಮರ್ಥವಾಗಿದ್ದವು. ಕ್ಷಣಕಾಲ ನೋಡಿ ಮಹಾತ್ಮನು ಆ ಫೋಟೋಗಳನ್ನು ಹಿಂದಕ್ಕೆ ಕೊಟ್ಟು ಹೇಳಿದನು:—"ಫೋಟೋಗಳನ್ನು ನೋಡಿಯಾಯಿತು. ತಿಳಿಯಬೇಕಾದುದನ್ನು ತಿಳಿದೂ ಆಯಿತು. ದೀಪವನ್ನು ಮೊದಲಿದ್ದಲ್ಲಿಡು."

ನಾನು ದೀಪವನ್ನು ಮೊದಲಿದ್ದಲ್ಲಿಟ್ಟು ಹಿಂದಿರುಗಿ ಬಂದು ಕುಳಿತೆನು.. ಮಹಾತ್ಮನು ಹೇಳಿದನು: "ಮಗೂ, ಮನಸ್ಸುಗೊಟ್ಟು ಕೇಳು. ಈ ಮೂವರಲ್ಲಿ ಯಾರೊಡನೆಯೂ ಕೂಡ ನಿನಗೆ ವಿವಾಹವಾಗುವದಿಲ್ಲ. ತಿಳಿಯಿತೆ? ಇದನ್ನೇ ಅಲ್ಲವೆ ನೀನು ಕೇಳಿದುದು? ಅಥವಾ ಬೇರೆ ಏನಾದರೂ ಕೇಳಿದ್ದೆಯಾ?"

ನಾನು ಹೇಳಿದೆನು:—'ಇದನ್ನೇ ನಾನು ಕೇಳಿದುದು.' ನಾನು ಆ ರೀತಿಯಾಗಿ ಪ್ರಶ್ನೆ ಮಾಡಿದುದರ ಗೂಢಾಭಿಪ್ರಾಯವನ್ನು ರಾಮಚಂದ್ರನು ತಿಳಿದನೋ ಇಲ್ಲವೋ ಗೊತ್ತಿಲ್ಲ. ಬುದ್ಧಿಪೂರ್ವಕವಾಗಿಯೇ ನಾನು ಹಾಗೆ ಪ್ರಶ್ನೆ ಮಾಡಿದ್ದೆನು.

"ಈ ಮೂವರೊಳಗೆ ಯಾರನ್ನು ವಿವಾಹವಾದರೆ ನನಗೆ ಶುಭವಾಗುವದು?" ಎಂದು ನಾನು ಪ್ರಶ್ನೆಮಾಡಿದ್ದರೆ, "ಈಕೆಯೊಡನೆ ವಿವಾಹವಾಗುವದು ಶುಭಕರ" ಎಂದು ಸುಲಭವಾಗಿ ಮಹಾತ್ಮನು ಏನೋ ಒಂದುತ್ತರ ಹೇಳಿಬಿಡುತ್ತಿದ್ದನು. ಹಾಗೆ ನಾನು ಕೇಳದೆ, "ಯಾವ ಹುಡುಗಿಯೊಡನೆ ವಿವಾಹವಾಗುವದು?" ಎಂದು ಪ್ರಶ್ನೆ ಮಾಡಿದ್ದೆನು. ಈ ಪ್ರಶ್ನೆಯು ನಿಜವಾಗಿಯೂ ಕಠಿಣವಾದುದು. ಇದರ ಉತ್ತರವನ್ನು ಕೇಳಿದ ಮೇಲೆ ಮಹಾತ್ಮನು ಸುಳ್ಳು ಹೇಳುವವನೆಂಬುದನ್ನು ಹೇಳಲು ಕಷ್ಟವಿರಲಿಲ್ಲ. ಮಹಾತ್ಮನು ತನ್ನ ಬುದ್ಧಿಯೆಂಬ ಒರೆಗಲ್ಲಿನಲ್ಲಿ ಪರೀಕ್ಷಿಸಿ, ಯಾವ ಹುಡುಗಿಯೊಡನೆ ವಿವಾಹವಾಗುತ್ತದೆಯೆಂದು ಹೇಳುತ್ತಾನೋ, ಆ ಹುಡುಗಿಯನ್ನು ವಿವಾಹ ಮಾಡಿಕೊಳ್ಳದೇ ಇದ್ದು, ಮಹಾತ್ಮನ ಆ ಮಾತನ್ನು ನಾನು ಸುಳ್ಳು ಮಾಡಬಹುದಾಗಿದ್ದಿತು. ಹೀಗೆಲ್ಲಾ ಆದ ಮೇಲೆ ರಾಮಚಂದ್ರನೂ ಕೂಡ ಮಹಾತ್ಮನಲ್ಲಿ ನಂಬಿಕೆಯನ್ನು ಬಿಟ್ಟುಬಿಡುತ್ತಿದ್ದನು. ಅದಕ್ಕೋಸ್ಕರವೇ ನಾನಲ್ಲಿಗೆ ಹೋಗಿದ್ದುದು. ಸರಳ ಪ್ರಕೃತಿಯ ರಾಮಚಂದ್ರನು ಇಂತಹ ಮೋಸಗಾರರನ್ನು ನಂಬುತ್ತಿದ್ದುದನ್ನು ತಪ್ಪಿಸಬೇಕಾಗಿದ್ದಿತು.

ನನ್ನ ಪ್ರಶ್ನೆಯು ನಿಜವಾಗಿಯೂ ಮಹಾತ್ಮನನ್ನು ಗಾಬರಿಯಲ್ಲಿ ಸಿಲುಕಿಸಿತು. ಆತನು ಸ್ವಲ್ಪ ಹೊತ್ತಿನವರೆಗೆ ಕಣ್ಣು ಮುಚ್ಚಿಕೊಂಡಿದ್ದನು. ಆ ಮೇಲೆ ಕಣ್ಣು ತೆರೆದು ಮೆಲ್ಲ ಮೆಲ್ಲನೆ ಹೇಳಿದನು: "ಮಗೂ, ನೀನೀಗ ತೋರಿಸಿದ ಮೂರು ಚಿತ್ರಗಳಲ್ಲಿರುವ ಮೂವರು ಹುಡುಗಿಯರಲ್ಲಿ ಯಾರೊಡನೆಯೂ ಕೂಡ ನಿನಗೆ ವಿವಾಹವಾಗುವದಿಲ್ಲವೆಂದು ಬ್ರಹ್ಮಲಿಖಿತವಿದೆ."

ಉತ್ತರವನ್ನು ಕೇಳಿ ನಾನು ಗಾಬರಿಯಾದೆನು. ಇಂತಹ ಉತ್ತರವು ಬರುವುದೆಂದು ನಾನು ಊಹಿಸಿಯೇ ಇರಲಿಲ್ಲ ಮನಸ್ಸನ್ನು ಬಿಗಿಹಿಡಿದು ಮೆಲ್ಲನೆ ನಗುತ್ತಾ ಹೇಳಿದೆನು: "ಸ್ವಾಮಿ, ತಮ್ಮ ಮಾತಿನ ಅಭಿಪ್ರಾಯವು ನನಗೆ ಹೊಳೆಯಲಿಲ್ಲ. ಈ ತಿಂಗಳೊಳಗೇ ನನಗೆ ವಿವಾಹವಾಗುವುದೆಂದು ನಾನು ಮೊದಲು ತಮ್ಮ ಹತ್ತಿರ ತಿಳಿಸಿದುದು ನೆನಪಿರಬಹುದು. ಈ ಮೂವರಲ್ಲೊಬ್ಬಳೊಡನೆ ವಿವಾಹವು ನನಗೆ ಆಗಿಯೇ ಆಗುವುದು. ಅದಕ್ಕೆ ಬೇಕಾದ ಸಾಮಗ್ರಿಗಳೆಲ್ಲವೂ ಸಿದ್ಧವಾಗಿವೆ."

ಮಹಾತ್ಮನು ಹೇಳಿದನು:—"ಮಗೂ, ಸಂಶಯಕ್ಕೆ ಆಸ್ಪದವೇ ಇರದಂತೆ ನಾನು ಹೇಳಿಬಿಟ್ಟಿರುವೆನು ಕೇಳು. ಇನ್ನೂ ಸ್ಪಷ್ಟವಾಗಿ ಹೇಳಿಬಿಡುತ್ತೇನೆ. ಈ ಮೊದಲ್ಗೊಂಡು ಇನ್ನೊಂದು ವರ್ಷದವರೆಗೆ ನಿನಗೆ ವಿವಾಹವೇ ಆಗುವುದಿಲ್ಲ. ನೀನು ತೋರಿಸಿದ ಚಿತ್ರಗಳಲ್ಲಿರುವ ಯಾವ ಹುಡು

ಗಿಯೂ ನಿನಗೆ ಹೆಂಡತಿಯಾಗುವದಿಲ್ಲ. ಇದು ಖಂಡಿತವಾದ ಮಾತು. ಇದಕ್ಕೆ ವಿರೋಧವಾಗಿ ಎಷ್ಟೇ ಪ್ರಯತ್ನಪಟ್ಟರೂ ಕೂಡ ಅದು ಸಫಲವಾಗುವುದಿಲ್ಲ. ತಿಳಿಯಿತೇ?''

ಯಾವುದಾದರೂ ದೊಡ್ಡ ಕಲ್ಲೊಂದು ಅಕಸ್ಮಾತ್ತಾಗಿ ತಲೆಯ ಮೇಲೆ ಬಿದ್ದರೆ ಹೇಗೆ ಆದೀತೋ, ಅದಕ್ಕಿಂತಲೂ ಹೆಚ್ಚಾದ ಆಶ್ಚರ್ಯವುಂಟಾಯಿತು! ಆ ಮಹಾತ್ಮನ ಉತ್ತರವನ್ನು ಕೇಳಿದೊಡನೆ ನಾನು ಗಾಬರಿಯಿಂದ ಕೇಳಿದೆನು:––"ಏನು, ನನಗೆ ಈ ತಿಂಗಳೊಳಗೆ ವಿವಾಹವಾಗಲಾರದೇ? ಪೂಜ್ಯರು ಈ ಸಂಗತಿಯನ್ನು ಚೆನ್ನಾಗಿ ವಿಚಾರ ಮಾಡಿ ಹೇಳೋಣಾಯಿತೇ? ಮನೆಯವರೆಲ್ಲರೂ ವಿವಾಹ ಸಾಮುಗ್ರಿಗಳನ್ನು ಸಿದ್ದಪಡಿಸುವ ಸಡಗರದಲ್ಲಿದ್ದಾರೆ; ತವಕಪಡುತ್ತಿದ್ದಾರೆ. ಅದೆಲ್ಲವೂ ಒಂದೇ ಬಾರಿಗೆ ನಿಷ್ಫಲವಾಗುವದೇ?''

ಮಹಾತ್ಮನು ಗಂಭೀರಧ್ವನಿಯಿಂದ ಹೇಳಿದನು:—"ಹೌದು. ಎಲ್ಲವೂ ಒಂದೇ ಬಾರಿಗೆ ನಿಷ್ಫಲವಾಗುವದು. ನಾನು ಚನ್ನಾಗಿ ನೋಡಿಯೇ ಅದನ್ನು ಹೇಳುತ್ತಿದ್ದೇನೆ. ನಿಶ್ಚಯವಿದು."

ರಾಮಚಂದ್ರನೆದುರಿಗೆ ನಾನು ಪ್ರತಿಜ್ಞೆ ಮಾಡಿದ್ದೆನು:––"ಮಹಾತ್ಮನೆದುರಿನಲ್ಲಿ ಅಗೌರವವಾಗಿ ವರ್ತಿಸುವದಿಲ್ಲ''ವೆಂದು. ಆದ್ದರಿಂದಲೇ ಕಷ್ಟದಿಂದ ಮನಸ್ಸನ್ನು ಬಿಗಿಹಿಡಿದು, ತಾನಾಗಿಯೇ ಹೊರಡುತ್ತಿದ್ದ ಅಟ್ಟಹಾಸವನ್ನು ನಿಲ್ಲಿಸಿಕೊಂಡಿದ್ದೆನು. ನಾನು ಮನಸ್ಸಿನಲ್ಲಿ ಯೋಚಿಸಿದೆನು:—"ಖಂಡಿತವಾಗಿಯೂ ಮಹಾತ್ಮನು ತಪ್ಪಿ ಹೇಳಿದನು. ಈ ತಿಂಗಳೊಳಗೆ ನನಗೆ ವಿವಾಹವಾಗದೆ ಇದ್ದೀತೇ? ಏಕಾಗುವುದಿಲ್ಲ? ಸಾಮುಗ್ರಿಯೆಲ್ಲ ಸಿದ್ಧವಾಗಿದೆ. ಹುಡುಗಿಯನ್ನು ಆರಿಸಿಯಾಗಿದೆ. ಮುಹೂರ್ತವನ್ನೂ ನಿಶ್ಚಯಿಸಿದಂತೆಯೇ ಇದೆ. ಹೀಗಿರಲು, ವಿವಾಹವಾಗಲು ತಡೆಯೇನಿದೆ? ಈ ರೀತಿ ತಲೆಗಾಲಿಲ್ಲದ ಮಾತನ್ನು ಮಹಾತ್ಮನು ಹೇಗೆ ಹೇಳಿದನು? ಖಂಡಿತವಾಗಿಯೂ ಮಹಾತ್ಮನ ಈ ಮಾತು ಸುಳ್ಳು. ನಾನೂ ಕೂಡ ಮಹಾತ್ಮನ ಈ ಮಾತನ್ನು ಸುಳ್ಳು ಮಾಡುವೆನು.''

ಹೊರಗೆ ಮಾತ್ರ ಗಾಂಭೀರ್ಯವನ್ನು ತೋರುತ್ತ ನಾನು ಹೇಳಿದೆನು:- "ಸ್ವಾಮಿ, ದಯವಿಟ್ಟು ಈ ವಿಷಯವನ್ನು ಪೂಜ್ಯರು ಅನುಗ್ರಹಿಸಿದಂತೆ ಇದನ್ನು ಸ್ವಲ್ಪ ಅನುಗ್ರಹಿಸಬೇಕು—"ನನಗೆ ಯಾವಾಗ ವಿವಾಹವಾಗುವುದು? ಯಾವ ಹುಡುಗಿಯು ನನಗೆ ಹೆಂಡತಿಯಾಗುವಳು? ಆಕೆಯಿರುವದೆಲ್ಲಿ? ಮಹಾತ್ಮರ ಮಾತನ್ನು ಕೇಳಿ, ನಾನು ನಿಶ್ಚಯವಾಗಿಯೂ ಆಶ್ಚರ್ಯದಲ್ಲಿ ಮುಳುಗಿರುವೆನು. ಪೂಜ್ಯರ ಅನುಗ್ರಹದಿಂದ ನನ್ನ ವಿವಾಹದ ಭವಿಷ್ಯತ್ಕಾಲದ ಎಲ್ಲ ಸಂಗತಿಯನ್ನೂ ತಿಳಿಯಬೇಕೆಂದಾಶೆಯಾಗಿದೆ.''

ಮಹಾತ್ಮನು ನನ್ನ ಪ್ರಶ್ನೆಗೆ ಒಡನೆ ಉತ್ತರವನ್ನು ಹೇಳಲಿಲ್ಲ. ಈ ಪ್ರಶ್ನೆಯನ್ನು ಕೇಳಿ ಮಹಾತ್ಮನು ಸ್ವಲ್ಪ ಗಾಬರಿಗೆ ಸಿಲುಕಿದಂತೆ ತೋರಿತು. ಕಣ್ಣುಗಳನ್ನು ಮುಚ್ಚಿಕೊಂಡು ಕ್ಷಣಕಾಲ ವಿಚಾರಮಾಡುತ್ತ ಇದ್ದನು. ನಾನೂ ಏಕಾಗ್ರತೆಯಿಂದ ಮಹಾತ್ಮನ ಮುಖವನ್ನು ನೋಡುತ್ತಿದ್ದೆನು.

ಮಹಾತ್ಮನು ನನ್ನನ್ನು ಕೇಳಿದನು:—"ಮಗೂ, ನಿನಗೆ ಮುಂದೆ ವಿವಾಹವಾಗುವ ಹೆಂಡತಿಯ ರೂಪವನ್ನು ನಾನು ವರ್ಣಿಸಬಹುದು. ಆಕೆಯು ಇರತಕ್ಕ ಸ್ಥಳವನ್ನು ಹೇಳಬಹುದೇ, ಎಂದು ನೀನು ಅಭಿಪ್ರಾಯಪಟ್ಟಿರುವಿಯಾ?"

ನಾನು ಹೇಳಿದೆನು:—"ಹೌದು. ತಮ್ಮಂತಹ ದಿವ್ಯದೃಷ್ಟಿಯ ಮಹಾತ್ಮರಿಗೆ ಎಲ್ಲವೂ ಪ್ರತ್ಯಕ್ಷವಾಗಿಯೇ ಇರುವುದಲ್ಲವೇ? ನಮಗಾದರೋ ಭವಿಷ್ಯತ್ಕಾಲದ ಎಲ್ಲಾ ಸಂಗತಿಯೂ ಕತ್ತಲೆ ಮುಸುಕಿದಂತಾಗಿದೆ. ಪೂಜ್ಯರೆ, ಅದನ್ನೂ ದಿವ್ಯದೃಷ್ಟಿಯ ಪ್ರಭಾವದಿಂದ ತಿಳಿದು ಹೇಳಬಲ್ಲಿರೆಂದು ಕೇಳುತ್ತಿರುವೆನು. ತಾವಂದಂತೆಯೇ ನನ್ನ ಅಭಿಪ್ರಾಯವಿದೆ."

ಆ ಮೇಲೆ ಆ ಮಹಾತ್ಮನು ಸ್ವಲ್ಪಕಾಲ ಏನೂ ಮಾತನಾಡಲಿಲ್ಲ. ಆಸನದಲ್ಲಿ ಸ್ಥಿರವಾಗಿ ಕುಳಿತು ಮೂಗಿನ ತುದಿಯಲ್ಲಿ ದೃಷ್ಟಿಯಿಟ್ಟು, ವಿಚಾರಮಾಡಲಾರಂಭಿಸಿದನು. ಆ ಕಾಲದಲ್ಲಿ ಮಹಾತ್ಮನ ಶರೀರವು ಮಾತ್ರ ಅಲ್ಲಿ ಇದ್ದು, ಮನಸ್ಸು ಎಲ್ಲಿಯೋ ವಿಚಾರಿಸಲು ಹೊರಟು ಹೋಗಿರುವಂತೆ ತೋರುತ್ತಿದ್ದಿತು. ನಮ್ಮೆದುರು ಉಸಿರಿನ ಶಬ್ದ ಮಾತ್ರ ಕೇಳಿಸುತ್ತಿತ್ತು. ಗುಡಿಸಿಲಿನ ಹೊರಗೆ ಪೂಜ್ಯಳಾದ ಗಂಗೆಯು ನಿಶ್ಶಬ್ದಳಾಗಿ ಹರಿಯುತ್ತಲಿದ್ದಳು. ವಾತಾವರಣವು ಎಲ್ಲ ಕಡೆಯಲ್ಲಿಯೂ ಪ್ರಶಾಂತವಾಗಿದ್ದಿತು.

ಮಹಾತ್ಮನು ನಿಶ್ಶಬ್ದವಾಗಿ ಪ್ರಶಾಂತನಾಗಿರುವದನ್ನು ಕಂಡು ನನ್ನ ಮನದಲ್ಲಿ ನಾನಾ ವಿಧವಾದ ವಿಕಲ್ಪಗಳು ಬರತೊಡಗಿದವು:-"ಏನು? ಈ ಮಹಾತ್ಮನು ನನ್ನ ಪ್ರಶ್ನೆಗೆ ಯಾವ ಉತ್ತರವನ್ನು ಕೊಡಲೆಂದು ಹೀಗೆ ಆಲೋಚಿಸುತ್ತಿರುವನೋ?"

"ನನ್ನ ಈ ಪ್ರಶ್ನೆಗೆ ಸರಿಯಾದುತ್ತರವು ದೊರೆತರೆ ಮಹಾತ್ಮನು ಸಿದ್ಧಪುರುಷನೆಂದು ನಂಬಿಕೆಯುಂಟಾಗಬಹುದು; ಆದರೆ ಈ ಪ್ರಶ್ನೆಗೆ ದೊರೆಯುವ ಉತ್ತರವು ನಿಜವೋ ಸುಳ್ಳೋ ಎಂಬದನ್ನು ಹೇಗೆ ಪರೀಕ್ಷಿಸಲಿ? "ಈ ಹುಡುಗಿಯರೊಳಗೆ ಯಾರೊಡನೆಯೂ ನಿನಗೆ ವಿವಾಹವಾಗುವದಿಲ್ಲ"ಎಂದು ಮೊದಲು ಹೇಳಿದುದರ ಪರೀಕ್ಷೆಯು ಸದ್ಯದಲ್ಲಿಯೇ ಆಗುವುದು. "ಈ ವರ್ಷದಲ್ಲಿ ನಿನಗೆ ವಿವಾಹವೇ ಆಗುವದಿಲ್ಲ" ಎಂಬುದರ ಪರೀಕ್ಷೆಯು ಮಾತ್ರ ವರ್ಷವಾದ ಮೇಲೆಯೇ ಸರಿ. ಈಗ ಕೇಳಿದ ಪ್ರಶ್ನೆಗೆ ಉತ್ತರವಾಗಿ ರೂಪ, ಹೆಸರು, ಸ್ಥಳ

ಮುಂತಾದುದನ್ನು ಹೇಳಿದ್ದೇ ಆದರೆ, ಅದರ ಪರೀಕ್ಷೆಯೂ ಒಂದು ವರ್ಷದ ಮೇಲೆಯೇ ಸರಿ. ಒಂದು ವರ್ಷವಾದ ಮೇಲೆ ಮಹಾತ್ಮನ ಮಾತು ಸುಳ್ಳೆಂದು ತಿಳಿದರೆ ಆಗ ನಾನೇನು ಮಾಡಬೇಕು? ಆ ಸಮಯದಲ್ಲೀ ಮಹಾತ್ಮನು ಎಲ್ಲಿರುವನೋ ಏನೋ! ಸಂಸಾರದಲ್ಲಿ ವೈರಾಗ್ಯ ಹುಟ್ಟಿದ ಮಹಾತ್ಮನು ನನ್ನ ಮುಂದಿನ ಹೆಂಡತಿಯ ರೂಪ, ಮೊದಲಾದುದನ್ನು ಹೇಗೆ ತಾನೇ ವರ್ಣಿಸ ಬಲ್ಲನು?" ಎಂದು ನನಗೆ ದೊಡ್ಡ ಕೌತುಕವಾಗಿದೆ. ಈಗಲೂ ಕೂಡ ಮಹಾತ್ಮನು ಪ್ರಶಾಂತನಾಗಿಯೇ ಕುಳಿತಿರುವನು. ನನಗುತ್ತರವನ್ನು ಹೇಗೆ ಕೊಡೋಣವೆಂದೇ ಚಿಂತಿಸುತ್ತಿದ್ದಾನೆಂದು ನಾನು ಊಹಿಸುತ್ತೇನೆ.

ಒಡನೆ ಮಹಾತ್ಮನ ಶರೀರವು ಸ್ವಲ್ಪ ಕದಲಿತು. ದೀರ್ಘವಾದ ಉಸಿರೊಂದು ಹೊರಗೆ ಹೊರಟಿತು. ನನ್ನ ಪ್ರಶ್ನೆಗೆ ಉತ್ತರವು ನಿರ್ಧರಿಸಲ್ಪಟ್ಟಿತೆಂದು ತೋರಿತು. ಮಹಾತ್ಮನು ನನ್ನ ಮೇಲೆ ನೋಟವನ್ನು ಬೀರಿ ಕೇಳಿದನು:—"ಮಗೂ, ನಿನ್ನ ಪ್ರಶ್ನೆಗೆ ಸಮಸ್ತ ಉತ್ತರವನ್ನೂ ನೀನು ತಿಳಿಯಲು ಬಯಸುತ್ತೀಯಾ?"

ನಾನು ಹೇಳಿದೆನು:—"ಪರಿಚಯವಿಲ್ಲದಿದ್ದರೂ ನನ್ನ ಮೇಲೆ ಪೂಜ್ಯರು ದಯವಿಟ್ಟು ತಮ್ಮ ಆಯಾಸವನ್ನು ಎಣಿಸದಿದ್ದರೆ........."

ಮಹಾತ್ಮನು ಹೇಳಿದನು:—"ಹೇಗೋ? ಆಗಲಿ. ನೋಡು, ಆ ಮೂಲೆಯಲ್ಲಿ ಮಣ್ಣಿನ ರಾಶಿಬಿದ್ದಿದೆ. ಆದರಲ್ಲಿದ್ದ ದೊಡ್ಡದಾದೊಂದು ಮಣ್ಣಿನ ಹೆಂಟೆಯನ್ನು ಇಲ್ಲಿ ತೆಗೆದುಕೊಂಡು ಬಾ."

ನಾನು ಮನದಲ್ಲಿಯೇ ತರ್ಕಿಸಿದೆನು:—"ಮಣ್ಣನ್ನು ತೆಗೆದುಕೊಂಡು ಮಹಾತ್ಮನೇನು ಮಾಡುವನು?"

ಮಣ್ಣಿನ ಹೆಂಟೆಯೊಂದನ್ನು ತಂದುಕೊಟ್ಟೆನು. ಮಹಾತ್ಮನು ಹೇಳಿದನು:—'ಇಗೋ ಈ ಕಾಲುಮಣೆಯನ್ನು ಹತ್ತಿರ ಇಟ್ಟುಕೊಂಡು ಅದರ ಮೇಲೆ ಈ ಹೆಂಟೆಯನ್ನಿಡು.

ನಾನು ಹಾಗೆಯೇ ಮಾಡಿದೆನು. ಮಹಾತ್ಮನು ಹೇಳಲಾರಂಭಿಸಿದನು: "ಮಗೂ, ಏಕಾಗ್ರತೆಯಿಂದ ಕೇಳು. ಎಲ್ಲಿರುವ, ಎಂತಹ, ಯಾವಳು, ಯಾವಾಗ ಹೆಂಡತಿಯಾಗುವಳು? ಎಂದು ಪ್ರಶ್ನೆ ಮಾಡುತ್ತಿರುವೆಯಲ್ಲವೆ? ನೀನು ಸ್ಥಿರವಾದ ಬುದ್ಧಿಯಿಂದ ಪ್ರಶಾಂತವಾದ ಮನಸ್ಸಿನಿಂದ ಆಲೋಚನೆ ಮಾಡಲು ಸಮರ್ಥನಿರುವೆಯಾದರೆ ನಿನ್ನ ಪ್ರಶ್ನೆಗೆ ನೀನೇ ಉತ್ತರವನ್ನು ತಿಳಿದುಕೊಳ್ಳುವೆ. ಯಾಕೆಂದರೆ, ಮನುಷ್ಯನು ಪ್ರತ್ಯೇಕವಾಗಿದ್ದು, ತನ್ನ ಇಚ್ಛಾಶಕ್ತಿಯ ಸಾಮರ್ಥ್ಯದಿಂದ ಅತ್ಯಾಶ್ಚರ್ಯಕರವಾದ ಕೆಲಸಗಳನ್ನು ಮಾಡಲು

ಸಮರ್ಥನಾಗುತ್ತಾನೆ. ಆತ್ಮಶಕ್ತಿಯ ಮುಂದೆ ಯಾವ ಶಕ್ತಿಯೂ ಇಲ್ಲ. ನೀನು ಮನಸ್ಸನ್ನು ದೃಢಪಡಿಸಿ ಏಕಾಗ್ರತೆಯಿಂದ ಕಾಲುಮಣೆಯ ಮೇಲಿರುವ ಮಣ್ಣಿನ ಹೆಂಟೆಯನ್ನು ನೋಡುತ್ತಿರು. ನಿನಗೆ ಮುಂದೆ ವಿವಾಹವಾಗುವ ಹುಡುಗಿಯನ್ನು ನೀನು ಇದರಲ್ಲಿ ನೋಡುವೆ."

"ಮಹಾತ್ಮನು ಇದೇನು ಹೇಳುತ್ತಿರುವನು? ಮಣ್ಣಿನಲ್ಲಿ ಯಾರದ್ದಾದರೂ ಚಿತ್ರವನ್ನು ನಾನು ಹೇಗೆ ನೋಡಲು ಸಾಧ್ಯವಾದೀತು?" ಎಂದು ನಾನು ಆಶ್ಚರ್ಯದಿಂದ-ಅಪನಂಬಿಕೆಯ ನೋಟದಿಂದ ಮಹಾತ್ಮನನ್ನು ನೋಡಿದೆನು. ಮಹಾತ್ಮನು ಹೇಳಿದನು:—"ಏನು, ಮಣ್ಣಿನಲ್ಲಿ ಚಿತ್ರವನ್ನು ನೋಡುವದಸಾಧ್ಯವೆಂದು ತಿಳಿದೆಯಾ? ನೀನು ನನ್ನ ಮಾತಿನಲ್ಲಿ ವಿಶ್ವಾಸವಿಟ್ಟು, 'ಇದು ಮಣ್ಣಲ್ಲ; ಪ್ರತಿಫಲಿಸುವ ಸಾಮರ್ಥ್ಯವಿರುವ ಗಾಜು' ಎಂದು ಸ್ವಲ್ಪಕಾಲ ಭಾವಿಸು."

ನಾನು ಕೇಳಿದೆನು: —"ಪೂಜ್ಯರೇ ನನ್ನನ್ನು ಪರಿಹಾಸ ಮಾಡುತ್ತಿರುವರೇ? ಮಣ್ಣನ್ನು ಗಾಜೆಂದು ನಾನು ಹೇಗೆ ತಾನೆ ಭಾವಿಸಲಿ? ಅದರೊಳಗೆ ಚಿತ್ರವನ್ನಾದರೂ ನೋಡಲು ಹೇಗೆ ಸಾಧ್ಯ? ಇಂಥದ್ದು ಯಾವಾಗಲಾದರೂ ಸಂಭವಿಸೀತೇ?"

ಮಹಾತ್ಮನು ಹೇಳಿದನು: -"ಯಾಕೆ ಸಂಭವಿಸುವದಿಲ್ಲ? ಈ ಸಂಸಾರದಲ್ಲಿ ಅಸಂಭವವಾದುದು ಒಂದೂ ಇಲ್ಲ. ಮನುಷ್ಯನು ತನ್ನ ಪ್ರಬಲವಾದ ಇಚ್ಛಾಶಕ್ತಿಯನ್ನು ಪ್ರಯೋಗಿಸಲು ಇಚ್ಛಿಸದೇ ಹೋದರೆ, ಅದು ಬೇರೆ ವಿಷಯ. ನೀನೀಗ ನಾನಂದಂತೆ ಮಾಡು. ಆ ಮೇಲೆ ನೋಡುವೆ, ಫಲವಾಗುವ್ರದೇ ಇಲ್ಲವೇ ಎಂಬದನ್ನು."

ಮಹಾತ್ಮನ ಮಾತಿನಲ್ಲಿ ಗಾಂಭೀರ್ಯವು ತುಂಬಿದ್ದಿತು. ಆದುದರಿಂದ ಆತನ ಮಾತು ಪರಿಹಾಸಕರವಾದುದೆಂದು ಕಲ್ಪಿಸುವದುಚಿತವಲ್ಲ. ಇಷ್ಟಾದರೂ ನನಗೆ ಮಹಾತ್ಮನ ಮಾತಿನಲ್ಲಿ ನಂಬಿಕೆಯುಂಟಾಗಲಿಲ್ಲ. ಏನು? ಮಾಡೋಣವೇ ಬೇಡವೇ? ಮಹಾತ್ಮನ ಮಾತು ನಿಜವೆಂದು ತಿಳಿಯಲೇ? ಪರಿಹಾಸದ ಮಾತೆಂದು ತಿಳಿಯಲೇ? ಯಾವುದನ್ನು ನಿಶ್ಚಯ ಮಾಡುವದಕೂ ಸಾಧ್ಯವಾಗಲಿಲ್ಲ.

ತಿರುಗಿ ಮಹಾತ್ಮನು ಹೇಳಿದನು:—"ಮಗೂ, ನೀನು ಸ್ಥಿರಚಿತ್ತನಾಗಿ ಮನಸ್ಸನ್ನೆಲ್ಲ ಈ ಮಣ್ಣಿನ ಹೆಂಟೆಯಲ್ಲಿಯೇ ಇಡು. ಉಳಿದುವೆಲ್ಲವನ್ನೂ ಮರೆತುಬಿಡು. ಈ ಅಶಾಂತಿಮಯವಾದ ಸಂಸಾರವನ್ನೂ, ನಿನ್ನ ಈ ಸ್ನೇಹಿತನನ್ನೂ, ಈ ಗುಡಸಿಲನ್ನೂ, ನನ್ನನ್ನೂ ಮರೆತುಬಿಡು. ಒಳಗಿನ ಕಲ್ಪನಾ

ಮಯವಾದ ದೃಷ್ಟಿಯಿಂದಲೂ ಕೂಡ ಮಣ್ಣಿನ ಹೆಂಟೆಯನ್ನೇ ನೋಡುತ್ತಿರು. ಮುಂದಿನ ಹೆಂಡತಿಯನ್ನಿಲ್ಲಿ ನೋಡಲಿಚ್ಛಿಸುತ್ತೇನೆಂದು ಸಂಪೂರ್ಣವಾಗಿ ಭಾವಿಸು. ಆ ಮೇಲೆ ನೀನೇ ನೋಡುವೆ ಏನು ತೋರುವದೆಂದು?''

ನಾನು ಆಲೋಚಿಸಿದೆನು:—''ಮಹಾತ್ಮನು ಹೇಳಿದಂತೆ ಮಾಡಲು ದೋಷವೇನು? ಸ್ಥಿರಚಿತ್ತನಾಗಿ ಏಕಾಗ್ರತೆಯಿಂದ ನೋಡಿದರೂ ಆ ಮೇಲೆ ನನಗೇನೂ ಕಾಣಿಸದಿದ್ದರೆ ಆಗ ಈ ಮಹಾತ್ಮನು ಖಂಡಿತವಾಗಿಯೂ ಮೋಸಗಾರನೆಂದೂ, ನನ್ನ ಪ್ರಶ್ನೆಗೆ ಉತ್ತರ ಕೊಡಲು ಕಷ್ಟವಾಗಿ ಇದೊಂದು ಪ್ರಕಾರವಾಗಿ ನನ್ನನ್ನು ಮೋಸಗೊಳಿಸುವನೆಂದೂ ನಿರ್ಧರಿಸಿಬಿಡಬಹುದು.'' ಸ್ವಲ್ಪ ಹೊತ್ತು ಮಹಾತ್ಮನ ಮಾತಿನಲ್ಲಿ ನಂಬಿಕೆಯಿಟ್ಟು, ಯಾವುದೋ ಆಶ್ಚರ್ಯವನ್ನು ನಾನು ಖಂಡಿತವಾಗಿಯೂ ನೋಡುತ್ತೇನೆಂದು ನಿಶ್ಚಯ ಮಾಡಿ, ಆ ಮಣ್ಣಿನ ಹೆಂಟೆಯಲ್ಲಿ ನೋಟವನ್ನು ಸ್ಥಿರವಾಗಿರಿಸಿ ಕುಳಿತುಕೊಂಡೆನು. ಗುಡಿಸಿಲಿನೊಳಗೆ ತುಂಬಾ ಶಾಂತಿಯಿದ್ದಿತು. ರಾಮಚಂದ್ರನು ನನ್ನ ಪಕ್ಕದಲ್ಲಿ ಕುಳಿತುಕೊಂಡು, ಒಂದು ಬಾರಿ ಕಾಲುಮಣೆಯ ಮೇಲಿದ್ದ ಮಣ್ಣಿನ ಹೆಂಟೆಯನ್ನೂ ಇನ್ನೊಂದು ಬಾರಿ ನನ್ನನ್ನೂ ನೋಡುತ್ತ ಕುಳಿತಿದ್ದನು. ಗುಡಸಿಲಿಗೆ ಬಂದ ಮೇಲೆ ಆತನು ಒಂದು ಶಬ್ದವನ್ನೂ ಉಚ್ಚರಿಸಲಿಲ್ಲ. ಮಹಾತ್ಮನೊಂದಿಗೆ ನಾನು ಸಂಭಾಷಣೆ ಮಾಡುತ್ತಿರುವಾಗ ಮಧ್ಯದಲ್ಲಿ ತಾನು ಮಾತಾಡುವದುಚಿತವಲ್ಲವೆಂದು ರಾಮಚಂದ್ರನು ಭಾವಿಸಿರುವನೆಂದು ತೋರುತ್ತದೆ. ಮಹಾತ್ಮನೂ ಕೂಡ ಸ್ಥಿರವಾದ ನೋಟದಿಂದ ನನ್ನನ್ನೇ ನೋಡುತ್ತಿದ್ದನು. ಆ ಸಮಯದಲ್ಲಿ ಆತನ ಕಣ್ಣುಗಳಿಂದ ಪ್ರತಿಕ್ಷಣವೂ ಮಿಂಚಿನಂತೆ ಒಂದು ವಿಧವಾದ ತೇಜಸ್ಸು ಹೊರಗೆ ಹೊರಡುತ್ತಿದ್ದಂತೆ ತೋರುತ್ತಿದ್ದಿತು.

ನಾನು ಮಹಾತ್ಮನ ಅಪ್ಪಣೆಯ ಮೇರೆಗೆ ಆ ಮಣ್ಣಿನ ಹೆಂಟೆಯಲ್ಲಿ ಮನಸ್ಸನ್ನು ಸ್ಥಿರವಾಗಿರಿಸಲು ಸಕಲ ಪ್ರಯತ್ನಗಳನ್ನೂ ಮಾಡುತ್ತಿದ್ದೆನು. ಈ ಮಧ್ಯದಲ್ಲಿ ಸಮಯವು ಹೇಗೆ ಕಳೆದುಹೋಯಿತೋ ನನಗೆ ತಿಳಿಯಲೇ ಇಲ್ಲ. ಮೆಲ್ಲಮೆಲ್ಲನೆ ಗುಡಸಿಲಿನೊಳಗೆ ಕತ್ತಲೆಯು ಕವಿದಂತೆ ತೋರತೊಡಗಿತು. ದೀಪದ ಬೆಳಕೂ ಕೂಡ ಇಲ್ಲದಂತಾಯಿತು. ಒಳಗೂ ಹೊರಗೂ, ಎಲ್ಲೆಲ್ಲಿಯೂ ಹಿಂದೆ ಅನುಭವಿಸದೇ ಇರುವ ಯಾವುದೋ ಒಂದು ತರಹದ ನಿಶ್ಚಲತೆಯು ತೋರುತ್ತಿದ್ದಿತು. ಹೇಗೆ ಹೇಗೆ ನನ್ನ ಮನಸ್ಸು ಏಕಾಗ್ರವಾಗಹತ್ತಿತೋ, ಹಾಗೆ ಹಾಗೆ ನನ್ನ ಹೃದಯದ ಚಲನೆಯೂ ಕೂಡ ಮಂದಮಂದವಾದಂತೆ ತೋರತೊಡಗಿತು. ಯಾವುದೋ ಒಂದು ಪ್ರಬಲವಾದ ಶಕ್ತಿಯು ಬಂದು ನನ್ನ ಮನಸ್ಸಿನಲ್ಲಿ ''ಸಿದ್ಧಪುರುಷನಾದ ಈ ಮಹಾತ್ಮನು ತನ್ನ ಇಚ್ಛಾ

ಶಕ್ತಿಯ ಮಹಿಮೆಯಿಂದ ನನ್ನೆದುರಿನಲ್ಲಿ ಯಾವುದೋ ಒಂದದ್ಭುತವಾದ ದೃಶ್ಯವನ್ನು ಖಂಡಿತವಾಗಿಯೂ ತೋರಿಸುವನು.'' ಎಂಬ ನಂಬಿಕೆಯನ್ನು ಉಂಟುಮಾಡಿದಂತೆ ತೋರಿತು. ಒಡನೆ ಆ ಮಣ್ಣಿನ ಹೆಂಟೆಯಲ್ಲಿ ಏನೋ ಒಂದು ವಿಧವಾದ ಮಾರ್ಪಾಡುಂಟಾಯಿತು. ಮಹಾತ್ಮನು ಹೇಳಿದಂತೆಯೇ ಆ ಮಣ್ಣಿನ ಹೆಂಟೆಯು ಪ್ರತಿಫಲನ ಸಾಮರ್ಥ್ಯವಿರುವ ಒಂದು ಗಾಜಾಗಿ ಪರಿಣಮಿಸಲು ತೊಡಗಿದಂತೆ ಅನುಭವವಾಯಿತು. ನಾನು ಮಂತ್ರದಿಂದ ಮುಗ್ಧನಾದಂತೆ ಈ ಆಶ್ಚರ್ಯವನ್ನು ನೋಡುತ್ತ-:''ಇದೇನು? ನನ್ನ ಕಣ್ಣಿನ ಭ್ರಾಂತಿಯೇ?'' ಎಂದೂಹಿಸುತ್ತಿರುವಾಗಲೇ ಆ ಮಣ್ಣಿನ ಹೆಂಟೆಯು ಎಲ್ಲಿಯೋ ಮಾಯವಾದಂತೆಯೂ, ಅದರ ಸ್ಥಳದಲ್ಲಿ ಅದೇ ಆಕಾರವಿರುವ ಒಂದು ಗಾಜು ಇದ್ದಂತೆಯೂ ನೋಡಿದೆನು. ನಿರ್ಮಲವಾದ ಆ ಗಾಜಿನಲ್ಲಿ ಕೆಳಗಿರುವ ಮಣೆಯು ಪ್ರತಿಬಿಂಬಿಸುತ್ತಿತ್ತು. ''ಏನು? ನನ್ನ ಕಣ್ಣುಗಳೇ ನನ್ನನ್ನು ವಂಚಿಸುತ್ತಿವೆಯೋ? ನನ್ನ ತಲೆಯು ತಿರುಗುತ್ತಿರುವುದೇ?'' ಒಂದು ಸಾರೆ ಕಣ್ಣುಗಳನ್ನು ಮುಚ್ಚಿ ತೆರೆದು ನೋಡಿದೆನು. ಆಗಲೂ ಅದೇ ದೃಶ್ಯ. ಆಲೋಚಿಸಿದೆನು--''ಮಣ್ಣಿನ ಹೆಂಟೆಯನ್ನು ಗಾಜಿನಂತೆ ನಾನು ಹೇಗೆ ನೋಡುತ್ತಿರುವೆನೋ, ಹಾಗೆಯೇ ರಾಮಚಂದ್ರನೂ, ಮಹಾತ್ಮನೂ ನೋಡುತ್ತಿರುವರೇ?'' ಎಂದು; ಆದರೆ ನಾನು ಪ್ರಯತ್ನಪಟ್ಟಾಗ್ಯೂ ನನ್ನ ಕಣ್ಣುಗಳು ಅವರ ಮುಖದ ಕಡೆಗೆ ಹೊರಳಲಾಗಲಿಲ್ಲ. ಗಾಜಿನಿಂದ ಕಿತ್ತು ಕಣ್ಣುಗಳನ್ನು ಬೇರೆ ಕಡೆಗೆ ತಿರುಗಿಸಲು ನನಗೆ ಶಕ್ತಿಯೇ ಇರಲಿಲ್ಲ. ಯಾವುದೋ ಒಂದು ಪ್ರಬಲವಾದ ಶಕ್ತಿಯು ಕಣ್ಣುಗಳನ್ನು ಅಲ್ಲಿಂದ ತೆಗೆಯಲು ಬಿಡುತ್ತಿರಲಿಲ್ಲ. ಆ ಮೇಲೆ ಆ ಗಾಜಿನಿಂದ ಏನೋ ಒಂದು ವಿಧ ಹಳದೀ ಬಣ್ಣದ ಬೆಳಕೊಂದು ನಿದಾನವಾಗಿ ಹೊರಗೆ ಹೊರಡುತ್ತಿದ್ದಂತೆ ತೋರಿತು. ಅದರಿಂದ ಆ ಗಾಜು ಅದರಲ್ಲಿರುವ ದೃಶ್ಯವನ್ನು ಮಾತ್ರ ತೋರುವಂತಾಯಿತು. ಒಡನೆ ನನ್ನ ಮನಸ್ಸಿಗೆ ತೋರಿತು:-''ಖಂಡಿತವಾಗಿಯೂ ಇದು ಇಂದ್ರಜಾಲ. ಐಂದ್ರಜಾಲಕನಾದೀ ಮಹಾತ್ಮನು ನನ್ನನ್ನು ಮೋಸಕ್ಕೆ ಸಿಲುಕಿಸಲುದ್ಯುಕ್ತನಾಗಿರುತ್ತಾನೆ ಗಟ್ಟಿಯಾಗಿ ಕೂಗಿ ಈತನ ಮೋಸಗಾರಿಕೆಯನ್ನು ಪ್ರಕಟಿಸುತ್ತೇನೆ.'' ಹೀಗೆಂದು ಕೋರಿ ನಾನು ಕೂಗಬೇಕೆಂದಿರುವಾಗ, ನನ್ನ ಕುತ್ತಿಗೆಯನ್ನು ಯಾರೋ ಒತ್ತಿ ಹಿಡಿದುಕೊಂಡಂತಾಯಿತು. ಸ್ವಲ್ಪ ಶಬ್ದವೂ ಕೂಡ ಹೊರಗೆ ಹೊರಡದಂತಾಯಿತು. ಬಲಾತ್ಕಾರವಾಗಿ ಯಾರೋ ಪ್ರೇರಿಸಿದಂತಾಗಿ, ನನ್ನ ಕಣ್ಣೂ ಮನಸ್ಸೂ ತಿರುಗಿ ಅದೇ ಗಾಜಿನಲ್ಲಿ ದೃಢವಾಗಿ ನಿಂತವು. ಒಂದು ನಿಮಿಷದ ಮೇಲೆ ತೋರಿತು: ಆ ಗಾಜಿನೊಳಗೆ ಹೊಗೆಯಂತೆ ಏನೋ ಹೊರಡುತ್ತಿತ್ತು, ಅದೇ ಹೊಗೆಯೋ

ಆ ಮೇಲೆ ದೊಡ್ಡದಾದೊಂದು ಮನೆಯು ಆಕಾರವನ್ನು ಪಡೆಯಿತು. ಸಿನೇಮಾ
ದಲ್ಲಿ ನಾನಾ ವಿಧವಾದ ದೃಶ್ಯಗಳನ್ನು ಒಂದಾದಮೇಲೊಂದನ್ನು ನೋಡುತ್ತಿ
ದ್ದಂತೆ ನಾನು ಆ ಗಾಜಿನಲ್ಲಿ ಒಂದೊಂದು ದೃಶ್ಯವನ್ನು ನೋಡತೊಡಗಿದೆನು.
ಆ ಮೇಲೆ ಒಂದು ರೈಲ್ವೆಸ್ಟೇಷನ್ನು ಸ್ಪಷ್ಟವಾಗಿ ತೋರತೊಡಗಿತು. ಉದ್ದ
ವಾದೊಂದು ರೈಲ್ವೆಯು ಸ್ಟೇಷನ್ನಿನಲ್ಲಿ ನಿಂತಿದ್ದಿತು. ಪ್ರಯಾಣಿಕರು ಹತ್ತು
ತ್ತಿದ್ದರು; ಇಳಿಯುತ್ತಿದ್ದರು ಕೂಲಿಕಾರರು ಇತ್ತಿಂದತ್ತ ಓಡಾಡುತ್ತಿದ್ದರು.
ಒಂದು ಪಕ್ಕದಲ್ಲಿ ಸಾಲಾಗಿ ಕೋಣೆಗಳಿದ್ದವು ಸ್ವಲ್ಪ ಮುಂದೆ ಇನ್ನೊಂದು
ಕಡೆಗೆ ಹೋಗುವ ರೈಲುದಾರಿಯೊಂದಿತ್ತು. "ಇದು ಯಾವ ರೈಲ್ವೆಸ್ಟೇಷನ್ನಿ
ದ್ದೀತು?" ಎಲ್ಲಿಯೂ ಹಿಂದೆ ನೋಡಿದಂತೆ ತೋರಲಿಲ್ಲ. ಸಿನೇಮಾದಂತೆ
ಎಲ್ಲವೂ ಸ್ಪಷ್ಟವಾಗಿಯೇ ತೋರುತ್ತಿದ್ದಿತು. ನಾನು ಭ್ರಾಂತನಂತೆಯೂ,
ಭೀತಿ ಪಟ್ಟವನಂತೆಯೂ ಉಸಿರುಕಟ್ಟಿ ಈ ದೃಶ್ಯವನ್ನು ನೋಡುತ್ತಿರುವಾಗಲೆ
ಒಬ್ಬ ಸುಂದರಿಯು ಚಿತ್ರವು ಎದುರಿಗೆ ಬಂದಿತು. ಆ ಸುಂದರಿಯು ಮುಂದ-
ಕ್ಕೆ ಬರುತ್ತಿದ್ದಂತೆಯೇ ಆ ಚಿತ್ರವು ಸ್ಪಷ್ಟವಾಗಿಯೇ ತೋರುತ್ತಿದ್ದಿತು. ಹದಿ
ನಾರು ವರ್ಷ ಪ್ರಾಯದ ಆ ಸುಂದರಿಯು ಹೊಂಬಣ್ಣದ ಜರಿಯುಳ್ಳ ಸೀರೆ
ಯನ್ನುಟ್ಟು ಬಿಳೀ ಕುಪ್ಪಸವನ್ನು ತೊಟ್ಟಿದ್ದಳು. ಹಂಸದ ನಡಿಗೆಯಂತಿ
ರುವ ಆಕೆಯ ನಡಿಗೆಯು ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸುತ್ತಿದ್ದಿತು
ಇಂತಹ ಸುಂದರಿಯನ್ನು ನಾನಿದುವರೆಗೂ ನೋಡಿಯೇ ಇರಲಿಲ್ಲ. ನೋ-
ಡುವದಿರಲಿ; ಇಂತಹ ಸುಂದರಿಯ ವರ್ಣನೆಯನ್ನು ಕೂಡ ಎಲ್ಲಿಯೂ ಓದಿ
ರಲಿಲ್ಲ; ಕೇಳಿಯೂ ಇರಲಿಲ್ಲ. ಆ ಸಮಯದಲ್ಲಿ ನಾನು ಕುಳಿತಿದ್ದ ಗುಡಸಿ
ಲನ್ನೂ, ಆ ಮಹಾತ್ಮನನ್ನೂ, ಮಹಾತ್ಮನ ಅನುಗ್ರಹದಿಂದ ಮಣ್ಣಿನ ಹೇಟಿ
ಯಲ್ಲಿ ನೋಡುತ್ತಿದ್ದ ಚಿತ್ರವನ್ನೂ ಆ ರೈಲ್ವೆ ಸ್ಟೇಷನನ್ನೂ ಎಲ್ಲವನ್ನೂ
ಕೂಡ ಒಂದೇ ಸಾರೆ ಮರೆತು, ಆ ಸುಂದರಿಯನ್ನೇ ನೋಡುತ್ತಿದ್ದೆನು.
"ಇಂತಹ ಸೌಂದರ್ಯವು ಈ ಭೂಲೋಕದಲ್ಲಿ ಸಿಗುವದೇ? ಅಥವಾ ಮಹಾ-
ತ್ಮನು ತನ್ನ ಇಚ್ಛಾಶಕ್ತಿಯಿಂದ ನಿರ್ಮಿಸಿದ ರೂಪರಾಶಿಯೇ ಇದು? ಈಕೆಯು
ನನಗೆ ಹೆಂಡತಿಯಾಗುವಳೇ? ನನಗೆ ಇಂತಹ ಅದೃಷ್ಟವಿರುವುದೇ? ನನ್ನ
ತಂದೆಯು ನನಗಾಗಿ ಆರಿಸಿದ ಆ ಮೂವರೂ ಈಕೆಯ ಕಾಲುಧೂಳಿಯ
ಹೋಲಿಕೆಯನ್ನೂ ಕೂಡ ಪಡೆಯಲಾರರು ಈಕೆಯು ನನಗೆ ಹೆಂಡತಿಯಾ
ಗುವಳೆಂಬುದರಲ್ಲಿ ಪ್ರಮಾಣವಾದರೂ ಏನು? ನನಗೇನೋ ತಲೆಯೇ ತಿರು
ಗುತ್ತಿದೆ" ನಾನು ಏನು ಮಾಡಬೇಕೆಂಬುದನ್ನು ತಿಳಿಯದೆ ಮೂಢನಂತೆ
ಆಕೆಯನ್ನು ಆದರದಿಂದ ನೋಡುತ್ತಿರುವಾಗಲೇ ಆಕೆಯು ಮಾಯವಾದಳು!

"ಹಾ! ಇದೇನು? ಎಲ್ಲಿಗೆ ಹೋದಳು? ಹೋಗಿಯೇ ಬಿಟ್ಟಳೇ?" ಎಂದು ಅತ್ತಿತ್ತ ನೋಡಿ ಆಕೆಯನ್ನು ಹುಡುಕುತ್ತಿದ್ದಾಗಲೇ ಮೊದಲು ನೋಡಿದ ಒಂದು ಪಕ್ಕದಲ್ಲಿ ಸಾಲಾಗಿರುವ ಕೋಣೆಗಳು, ಅದೇ ರೈಲ್ವೆ ಸ್ಟೇಷನ್, ಅದೇ ದೊಡ್ಡ ಮನೆ ಮುಂತಾದವುಗಳು ಕ್ಷಣಕಾಲ ತೋರಿ, ಹಾಗೆಯೇ ಕ್ರಮವಾಗಿ ಮಾಯವಾಗುತ್ತಿದ್ದವು ಚಿತ್ರ ಬರೆಯುವ ಮನುಷ್ಯನು ತಾನು ಬರೆದ ಚಿತ್ರಗಳನ್ನು ಮನಸ್ಸಿಗೊಪ್ಪದಿದ್ದೊಡನೆ ಬಿಳೀ ಬಣ್ಣದ ಬ್ರಷ್ಷಿನಿಂದ ಅಳಿಸಿ ಬಿಡುವಂತೆ ಆ ದೃಶ್ಯವೆಲ್ಲವೂ ಮೋಡದಂತೆ ಮಾಯವಾಗಿ ಮೊದಲಿನಂತೆ ಹೊಗೆಯು ಮಾತ್ರ ಕಾಣಿಸಿತು. ಕ್ಷಣದೊಳಗೆ ಆ ಹೊಗೆಯೂ ಮೆಲ್ಲಮೆಲ್ಲನೆ ಇಲ್ಲದಂತಾಗಿ ಗಾಜು ಮಾತ್ರ ತೋರಲಾರಂಭಿಸಿ, ಆ ಮೇಲೆ ಅದೂ ಹೋಗಿ, ಅಲ್ಲಿ ಮೊದಲಿನ ಮಣ್ಣು ಹೆಂಟೆಯೇ ಕಾಣಿಸಿತು!

ನಾನು ಸ್ವಾಭಾವಿಕವಾಗಿ ಭಯವಿಲ್ಲದ. ಹೃಷ್ಟಪುಷ್ಟಾಂಗನಾದ ತರುಣ ನಾಗಿದ್ದರೂ ಕೂಡ ಆ ಸಮಯದಲ್ಲಿ ನಡುಗುವ ಸರ್ವಾಂಗವುಳ್ಳವನಾಗಿ, ಯಾವುದೋ ಒಂದು ಭಯಕ್ಕೆ ಸಿಲುಕಿದಂತೆ ಆಗಿದ್ದೆನು. ಹಾಗೆ ನಾನು ಆಗಿದ್ದೆ ನೆಂದು ಹೊರಗೆ ಹೇಳುವುದು ನಾಚಿಕೆಗೇಡಾದರೂ ಖಂಡಿತವಾಗಿ ಹಾಗೆ ನಡೆದುದೇನೋ ನಿಜವು. ಗಟ್ಟಿಯಾಗಿ ಕೂಗಿ ಇಂದ್ರಜಾಲಮಯವಾದ ಆ ಗುಡಸಲಿನಿಂದ ಹೊರಬಿದ್ದು, ತತ್ಕ್ಷಣ ಓಡಿಹೋಗಬೇಕೆಂದು ನಾನು ಮನ ಸ್ಸಿನಲ್ಲಿ ಇಚ್ಛಿಸಿದರೂ ಕೂಗುವದಕ್ಕೇ ಆಗಲಿ ಏಳುವದಕ್ಕೇ ಆಗಲಿ ಅಶಕ್ತನಾಗಿ ದ್ದೆನು. ಮೆಲ್ಲಮೆಲ್ಲನೆ ನನ್ನ ಶರೀರದಲ್ಲಿ ಅಲುಗಾಡುವ ಶಕ್ತಿಯು ಹಿಂದಿ ರುಗಿ ಬರುತ್ತಿದ್ದಂತೆ ತೋರುತ್ತಿದ್ದಿತು. ಕಷ್ಟದಿಂದ ಕಣ್ಣುಗಳನ್ನು ಮಣ್ಣಿನ ಹೆಂಡೆಯಿಂದ ತಪ್ಪಿಸಿ, ಮುಖವನ್ನು ಮೇಲಕ್ಕೆತ್ತಿ ಗುಡಸಿಲನ್ನು ಸುತ್ತಲೂ ನೋಡಿದನು. ಎಲ್ಲಾ ಕಡೆಯಲ್ಲಿಯೂ ಕತ್ತಲೆಯು ಕವಿದಿತ್ತು. ನೊಂದಿ ಹೋಗುವ ಸ್ಥಿತಿಯಲ್ಲಿದ್ದ ದೀಪವು ಅಮಾವಾಸ್ಯೆಯ ಕತ್ತಲೆಯಲ್ಲಿ ಹೊಳೆ ಯುವ ಒಂದು ನಕ್ಷತ್ರದಂತೆ ತೋರುತ್ತಿದ್ದಿತು.

ನನ್ನ ಪಕ್ಕದಲ್ಲ ಕುಳಿತಿದ್ದ ರಾಮಚಂದ್ರನು ಚಿತ್ರದಲ್ಲಿ ಬರೆದಿರುವಂತೆ ಸುಮ್ಮನೆ ಕುಳಿತಿದ್ದನು. ಬಾರುಗೋಲಿನಿಂದ ಹೊಡೆದೆಬ್ಬಿಸಿದಂತೆ ಒಡನೆ ನಾನು ಮೊದಲಿನಂತೆಯೇ ಆದೆನು. ಯಾವನಾದರೊಬ್ಬನು ಸುಖಮಯ ವಾದೊಂದು ಸ್ವಪ್ನವನ್ನು ಕಂಡು ಆಕಸ್ಮಾತ್ತಾಗಿ ಎಚ್ಚತ್ತಂತೆ, ಆಗ ನನ್ನ ಸ್ಥಿತಿಯಾಗಿದ್ದಿತು.

"ಮಗೂ, ದೀಪವು ನೊಂದುವ ಹಾಗೆ ಆಗಿದೆ; ಎಣ್ಣೆ ಹಾಕು" ಎಂಬ ಮಹಾತ್ಮನ ಮಾತು ಕಿವಿಗೆ ಬಿದ್ದಿತು. ರಾಮಚಂದ್ರನದನ್ನು ಕೇಳಿ ನಿದ್ರೆ

ಯಿಂವೆಚ್ಚತ್ತಂತೆ ಎದ್ದು ದೀಪಕ್ಕೆ ಎಣ್ಣೆ ಹಾಕಿದನು ದೀಪವು ದೊಡ್ಡದಾಗಿ ಗುಡಸಿಲೆಲ್ಲವೂ ಬೆಳಗತೊಡಗಿತು. ಮಹಾತ್ಮನು ಮೊದಲಿನಂತೆಯೇ ಗಂಭೀರ ವಾದ ಆಕೃತಿಯುಳ್ಳವನಾಗಿ ಮೊದಲಿನ ಸ್ಥಳದಲ್ಲಿಯೇ ಕುಳಿತಿದ್ದನು

ನಾನು ನಡುಗುವ ಸ್ವರದಿಂದ ಮಹಾತ್ಮನನ್ನು ಕೇಳಿದೆನು: "ಸ್ವಾಮೀ, ಇವೆಲ್ಲ ಏನು ಲೀಲೆ? ಏನೀ ಅದ್ಭುತವಾದ ಕೆಲಸ? ನಾನು ನೋಡಿದ್ದವುಗಳಲ್ಲಿ ಸ್ವಲ್ಪ ಅಂಶವಾದರೂ ನಿಜವಾದುದೇ? ಅಥವಾ ಬರಿಯ ವಿಕಾರದ ವಿಲಾಸವೇ? ಪೂಜ್ಯರು ಹೇಳೋಣವಾಗಲಿ. ನನ್ನ ಈ ಸಂದೇಹವನ್ನು ಕೂಡಲೆ ಪರಿ ಹರಿಸೋಣವಾಗಲಿ."

ಮಹಾತ್ಮನು ನಗುತ್ತ ಹೇಳಿದನು:—"ಮಗೂ, ನೀನು ನೋಡಿದು ದೆಲ್ಲವೂ ನಿಜ. 'ಯಾವ ಹುಡಗಿಯನ್ನು ಮುಂದೆ ವಿವಾಹವಾಗುವೆನು.' ಎಂದು ನೀನು ಕೇಳಿದ ಪ್ರಶ್ನೆಗೇನೆಯೇ ನಾನು ಉತ್ತರವನ್ನು ಈ ಮೂಲಕ ವಾಗಿ ಕೊಟ್ಟಿರುವೆನು. ನಿನ್ನ ಮನಸ್ಸಿಗೆ ತೃಪ್ತಿಯುಂಟಾಯಿತೇ?"

ನಾನು ಹೇಳಿದೆನು:—"ಸಂತೋಷವೇ! ಇಲ್ಲ, ಅಸಂತೋಷವೇ ಉಂಟಾಗಿದೆ. ಮೊದಲಿಗಿಂತಲೂ ನೂರರಷ್ಟು ಹೆಚ್ಚಿನ ಚಿಂತೆಯು ಈಗ ಉಂಟಾಗಿದೆ. ಪೂಜ್ಯರಿದನ್ನು ಹೇಳೋಣಾಗಲಿ. ಇದೆಲ್ಲವೂ ಎಲ್ಲಿಂದ ಉಂಟಾ ಯಿತು? ಇಂತಹ ದೃಶ್ಯವನ್ನು ನೋಡಲು ನಾನು ಹೇಗೆ ಶಕ್ತನಾದೆನು? ನಾನು ನೋಡಿದ ಆ ಚಿತ್ರವು ಜೀವಿಸುತ್ತಿರುವಂತೆಯೇ ತೋರಿತು. ಏನು? ಇಂತಹ ಇಂದ್ರಜಾಲವೂ ಸಂಭವಿಸುವದೇ?"

ಮಹಾತ್ಮನು ಸ್ಥಿರವಾದ ಸ್ವರದಿಂದ ನುಡಿದನು-:"ಯಾಕೆ ಸಂಭವಿಸುವ ದಿಲ್ಲ? ಸಂಭವಿಸಲಾರದಾಗಿದ್ದರೆ ನೀನು ಹೇಗೆ ನೋಡಿದೆ? ನಾನು ಮೊದಲೇ ಹೇಳಲಿಲ್ಲವೆ?—ಇಚ್ಛಾಶಕ್ತಿಯ ಪ್ರಭಾವದಿಂದ ಎಲ್ಲವೂ ಸಂಭವಿಸುವದೆಂದು. ಆ ಇಚ್ಛಾಶಕ್ತಿಯು ಮಹಾತ್ಮೆಯನ್ನೇ ನಿನಗೆ ತೋರಿಸಿದೆನು ಸಾಕು; ಉಳಿದ ವಿಷಯದಿಂದ ನಿನಗೇನು ಲಾಭ? ನಾನೀಗ ವಿಶ್ರಮಿಸಿಕೊಳ್ಳುತ್ತೇನೆ"

ನಾನು ಕೈಮುಗಿದು ವಿನಯದಿಂದ ನುಡಿದೆನು:—"ಸ್ವಾಮಿ, ತಾವು ತುಂಬಾ ಉಪಕಾರ ಮಾಡೋಣಾಯಿತು. ಪೂಜ್ಯರ ಅನುಗ್ರಹದಿಂದಲೇ ನಾನೀ ಅದ್ಭುತವಾದ ವ್ಯಾಪಾರವನ್ನು ನೋಡಲು ಶಕ್ತನಾದೆನು; ಆದರೆ ಇನ್ನು ಒಂದೇ ಒಂದು ವಿಷಯವನ್ನು ತಿಳಿಯಬೇಕೆಂದಿದ್ದೇನೆ. 'ನಾನು ನೋಡಿ ದ ಆ ರೇಲ್ವೆ ಸ್ಟೇಶನ್ನಿನ ಹೆಸರೇನು?' ಎಂದು."

ಮಹಾತ್ಮನು ಹೇಳಿದನು:-"ಮಗೂ, ಇಷ್ಟರ ಮೇಲೆ ನಾನು ಏನನ್ನೂ ಹೇಳಲು ಬಯಸುವದಿಲ್ಲ. ನಿನ್ನ ಪ್ರಾರ್ಥನೆಗೆ ಅನುಸಾರವಾಗಿ ಎಷ್ಟು ಹೇಳಿ

ದೆನೋ, ಎಷ್ಟು ತೋರಿಸಿದೆನೋ ಅಷ್ಟರಿಂದಲೇ ತೃಪ್ತನಾಗು. ನಾನಿಷ್ಟು ತೋರಿಸಿದುದೂ ಕೂಡ ಈ ನಿನ್ನ ಸ್ನೇಹಿತನಿಗಾಗಿ ಎಂದು ತಿಳಿ ರಾಮಚಂದ್ರ, ನೀನು ಬೆಳಿಗ್ಗೆ ಇಲ್ಲಿಗೆ ಬಂದಾಗ ನಿನ್ನ ತಂದೆಯ ಹೆಸರನ್ನು ಕೇಳಿ, ನಿನ್ನ ಪರಿಚಯವುಂಟಾಯಿತು. ನಿನ್ನ ತಂದೆಯು ಬಾಲ್ಯದಲ್ಲಿ ನನಗೆ ಸಹಪಾಠಿಯಾಗಿದ್ದನು. ನಾವಿಬ್ಬರೂ ಪೂಜ್ಯರಾದ ಈಶ್ವರಾವಧಾನಿಗಳ ಪಾಠಶಾಲೆಯಲ್ಲಿ ವೇದವನ್ನು ಕಲಿತೆವು. ನಿನ್ನ ತಂದೆಯು ಪಾಠಶಾಲೆ ಮುಗಿದೊಡನೆ ವಿವಾಹ ಮಾಡಿಕೊಂಡನು. ನಾನು ಮಾತ್ರ ಇದೇ ಸ್ಥಿತಿಯಲ್ಲಿದ್ದು, ಅಲ್ಲಲ್ಲಿ ತೀರ್ಥ-ಕ್ಷೇತ್ರಗಳಲ್ಲಿ ತಿರುಗುತ್ತಲಿದ್ದೇನೆ. ಹದಿನಾಲ್ಕು ವರ್ಷಗಳ ಹಿಂದೆ ನಾಸಿಲ್ಲಿಗೆ ಬಂದಿದ್ದಾಗ ನಿನ್ನ ತಂದೆಯು ಎಂಟು ವರ್ಷದ ನಿನ್ನನ್ನು ಜೊತೆಯಲ್ಲಿ ಕರೆದುಕೊಂಡು ಬಂದಿದ್ದನು. ಇರಲಿ. ನಿನ್ನ ಸಂತೋಷಕ್ಕಾಗಿಯೇ ಈ ನಿನ್ನ ಸ್ನೇಹಿತನ ಪ್ರಶ್ನೆಗಳಿಗುತ್ತರವನ್ನು ಹೇಳಿದೆನು."

ರಾಮಚಂದ್ರನು ನಮಸ್ಕರಿಸಿ ಹೇಳಿದನು:—"ನಾನು ತಿಳಿದಿರಲಿಲ್ಲ ಸ್ವರ್ಗಸ್ಥನಾದ ನನ್ನ ತಂದೆಗೂ, ತಮಗೂ ಸ್ನೇಹವಿರುವದೆಂದು. ನನ್ನ ತಂದೆಯು ಯಾವದೋ ಒಂದು ಸಮಯದಲ್ಲಿ ಹೇಳಿದ್ದನು:—'ಹಿಂದೆ ನನ್ನೊಡನೆ ಓದುತ್ತಿದ್ದ ಸದಾಶಿವ ಬ್ರಹ್ಮಚಾರಿಯೆಂಬೊಬ್ಬರು ಈಗ ಆತ್ಯದ್ಭುತವಾದ ಕೆಲಸಗಳನ್ನು ಮಾಡುತ್ತಿರುವರು ಎಂದು' ಆ ಮಾತು ತಮಗೆ ಸಂಬಂಧಿಸಿದುವೇ ಅಲ್ಲವೆ?"

ಮಹಾತ್ಮನು ನಸುನಕ್ಕು ಹೇಳಿದನು:—"ಹೌದು. ಸಾಕು ಪ್ರಕೃತ ವಿಷಯವಿಲ್ಲಿಗೆ ಇರಲಿ. ನಿನಗೇನಾದರೂ ಕೇಳುವ ಆಶೆಯಿರುವುದೇ?"

ರಾಮಚಂದ್ರನು ಹೇಳಿದನು:—ತಮ್ಮನ್ನು ನೋಡಿ ಸ್ವರ್ಗದಿಂದಿಳಿದು ಬಂದ ತಂದೆಯಂತೆ ಭಾವನೆಯಾಗಿದೆ. ತಮ್ಮ ಅನುಗ್ರಹದಿಂದ ಈಗ ನನಗೆ ಯಾವುದರಲ್ಲಿಯೂ ಕೊರತೆಯಿಲ್ಲ. ಮತ್ತೇನೆಂದರೆ, ಧರ್ಮದಲ್ಲಿ ಸ್ಥಿರವಾದ ನಂಬಿಕೆಯು ನನಗೆ ಯಾವಾಗಲೂ ಇರಲೆಂಬುದೇ ಪ್ರಾರ್ಥನೆ. ಈ ನನ್ನ ಸ್ನೇಹಿತನಾದ ಮಧುರಮೋಹನನು ಎಲ್ಲಿಯೂ ವಿಶ್ವಾಸವಿಡುವದಿಲ್ಲ ಧರ್ಮ ಮೊದಲಾದವುಗಳೆಲ್ಲವೂ ಮೋಸಗಾರರವೆಂದು ವಾದಿಸುತ್ತಾನೆ. ಈ ವಿಷಯದಲ್ಲಿ ನನ್ನೊಡನೆ ಯಾವಾಗಲೂ ಜಗಳಾಡುತ್ತಿರುತ್ತಾನೆ. ಈಗ ಪೂಜ್ಯರು ಈತನ ಸಂಶಯವನ್ನು ಪರಿಹರಿಸಿ ಬಹಳ ಉಪಕಾರವನ್ನು ಮಾಡಿದರು. ಪೂಜ್ಯರೇನಾದರೂ ಸೇವೆಮಾಡಲು ಆಜ್ಞಾಪಿಸಿದರೆ, ನಾನು ಧನ್ಯನಾಗುತ್ತಿದ್ದೆನು ನಾಳೆ ತಿರುಗಿ ಪೂಜ್ಯರ ಭೇಟಿಯಾಗಬಹುದಲ್ಲವೇ?"

ಮಹಾತ್ಮನು ಹೇಳಿದನು: "ನನ್ನದು ಯಾವುದೂ ನಿಶ್ಚಯವಿಲ್ಲ. ನಾಳೆ

ಯೇ ಇಲ್ಲಿಂದ ಹೊರಟು ಹೋದರೂ ಹೋಗಬಹುದು. ಹೇಗಿದ್ದರೂ ಸರಿ. ನೀವಿಬ್ಬರಿನ್ನು ಮುಂದೆ ಇಲ್ಲಿಗೆ ಬರಲಾಗದು. ಈಗ ನೋಡಿದ ಈ ಅದ್ಭುತ ವ್ಯಾಪಾರವನ್ನು ಮತ್ತೆಲ್ಲಿಯೂ ಚರ್ಚಿಸಲೂ ಕೂಡದು. ಈ ಸಂಗತಿಯು ಅನ್ಯರ ಕಿವಿಗೆ ಬೀಳುವುದು ನನಗೆ ರುಚಿಸದು. ನಂಬಿಕೆಯಿಲ್ಲದ ಜನಗಳಿದನ್ನು ಕೇಳಿದರೆ ಸುಮ್ಮನೆ ಪರಿಹಾಸಮಾಡುವರು. ಆದ್ದರಿಂದಿದನ್ನು ನಂಬಿಕೆಯಿಲ್ಲದವರಲ್ಲಿ ಎಂದಿಗೂ ಪ್ರಕಟಿಸಬಾರದು ಸಾಕು. ನೀವಿಬ್ಬರಿನ್ನು ತೆರಳಿರಿ. ಕಲ್ಯಾಣಸ್ವರೂಪಿಯಾದ ಈಶ್ವರನು ನಿಮಗೆ ಶುಭವನ್ನುಂಟು ಮಾಡಲಿ. ನೀವಿಲ್ಲಿಗೆ ಬಂದು ಬಹಳ ಹೊತ್ತಾಯಿತು."

ಆ ಮೇಲೆ ನಾವು ಮಹಾತ್ಮನಿಗೆ ವಂದಿಸಿ, ಗುಡಸಿಲಿನಿಂದ ಹೊರಗೆ ಬಂದೆವು. ಸ್ವಲ್ಪ ದೂರ ಹೋದಮೇಲೆ ರಾಮಚಂದ್ರನನ್ನು ಕೇಳಿದೆನು:—'ಗುಡಸಿಲಿನಲ್ಲಿ ಏನೋ ನೋಡಿದೆವಷ್ಟೇ? ಆ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು?'

ರಾಮಚಂದ್ರನು ಹೇಳಿದನು:—"ನೋಡಿದ್ದರೆ ತಾನೇ ಅಭಿಪ್ರಾಯ ಹೇಳುವುದು? ನಾನಲ್ಲಿ ಏನನ್ನೂ ನೋಡಲಿಲ್ಲ ಹೀಗಿರುವಾಗ ನಾನೇನು ಹೇಳಲಿ?"

ನಾನು ಆಶ್ಚರ್ಯದಿಂದ ಕೇಳಿದೆನು:—"ಎಲಾ! ನೀನು ಹಾಸ್ಯಮಾಡುತ್ತೀಯಾ? ಆ ರೈಲ್ವೆಸ್ಟೇಶನ್ನು; ಮತ್ತಲ್ಲಿ ಹಳದಿ ಸೀರೆಯನ್ನುಟ್ಟಿದ್ದ ಆ ಸುಂದರ ತರುಣಿ! ಇದ್ಯಾವುದನ್ನೂ ನೀನು ನೋಡಲಿಲ್ಲವೆ?"

ರಾಮಚಂದ್ರನು ಗಂಭೀರ ಸ್ವರದಿಂದ ಹೇಳಿದನು:-"ನಾನು ನಿಜವಾಗಿಯೂ ಹೇಳುತ್ತೇನೆ; ನಾನು ನಿನ್ನ ಪಕ್ಕದಲ್ಲಿಯೇ ಕುಳಿತಿದ್ದೆನು. ಆ ಮುಸುಕು ಮುಸುಕಾದ ಬೆಳಕಿನಲ್ಲಿ ಕಾಲುಮಣೆಯ ಮೇಲ್ಗಡೆಯಿದ್ದ ಮಣ್ಣುಹೆಂಟೆ ಮಾತ್ರವಲ್ಲದೆ ಇನ್ಯಾವುದೂ ನನಗೆ ಕಾಣಿಸಲಿಲ್ಲ. ನೀನೇ ಹೇಳು, ಆಗ ನೀನಲ್ಲಿ ಏನನ್ನು ನೋಡಿದೆ? ಅಲ್ಲಿ ಮಹಾತ್ಮನ ಸನ್ನಿಧಾನದಲ್ಲಿದ್ದಾಗ ನಿನ್ನ ಹತ್ತಿರ ಏನನ್ನೂ ಕೇಳಲಾಗಲಿಲ್ಲ."

ನಾನಲ್ಲಿ ನೋಡಿದುದೆಲ್ಲವನ್ನೂ ರಾಮಚಂದ್ರನಿಗೆ ಹೇಳಿದೆನು. ಅದನ್ನು ಕೇಳಿ ಅವನು ಹೇಳಿದನು:-"ಈ ಪ್ರಭಾವವು ಮಹಾತ್ಮನದೇ ಸರಿ. ಆತನ ಅನುಗ್ರಹದಿಂದಲೇ ನೀನಿದನ್ನು ನೋಡಿದೆ. ನೀನು ನೋಡಿದ ದೃಶ್ಯದಲ್ಲಿ ಜೀವವಿರುವಂತೆಯೇ ಕಾಣಿಸಿತೇ? ಅಥವಾ ಬರಿಯ ಕಣ್ಣಿನ ಭ್ರಮೆಯೇ ಸರಿಯೊ?"

ನಾನು ನಿಶ್ಚಯ ಧ್ವನಿಯಿಂದ ಹೇಳಿದೆನು:—"ಖಂಡಿತವಾಗಿಯೂ

ಜೀವವಿರುವ ದೃಶ್ಯವನ್ನೇ ನೋಡಿದೆನು. ಸಂಶಯವಿಲ್ಲ; ಆಕೆಯು ಬಹು ಚನ್ನಾಗಿದ್ದಳು. ನಾನು ಜೀವವಿರುವವರೆಗೂ ಆ ಸುಂದರಿಯ ಚಿತ್ರವನ್ನು ಮರೆಯಲಾರೆನು. ನಾನೆಷ್ಟು ಆಲೋಚನೆ ಮಾಡಿದರೂ ಕೂಡ ಇದು ಮಾತ್ರ ಮನಸ್ಸಿಗೆ ಹಿಡಿಯುವದಿಲ್ಲ:—'ಈ ಪ್ರಕಾರವಾಗಿ ನೋಡಲು ನಾನು ಹೇಗೆ ಶಕ್ತನಾದೆನು? ಮಹಾತ್ಮನಾದರೂ ಆ ಮಣ್ಣಿನ ಹೆಂಟೆಯಲ್ಲಿ ವಿಚಿತ್ರ ತರವಾದ ಈ ನಾಟಕವನ್ನು ಯಾವ ಶಕ್ತಿಯಿಂದ ತೋರಿದನು?' ನನಗೇನೋ ಮಹಾತ್ಮನು ಸ್ವಲ್ಪ ಮೆಸ್ಮರಿಜಂ ವಿದ್ಯೆಯನ್ನರಿತಿರುವನೆಂದು ತೋ-ರುತ್ತದೆ. ಆದ್ದರಿಂದ ನಾನು ಬರಿಯ ಮಾಯೆಯಲ್ಲಿ ಬಿದ್ದುಬಿಟ್ಟೆನು"

ರಾಮಚಂದ್ರನು ಹೇಳಿದನು:—"ಸರಿ. ನಿನಗೆ ತಿರುಗಿ ಸಂಶಯ ಪಿಶಾಚಿಯು ಹಿಡಿದಿದೆ. ಆ ಸಂಸ್ಕಾರವು ಬಲವಾದುದಲ್ಲವೆ? ಮಹಾತ್ಮನ ಯೋಗ ಸಾಮರ್ಥ್ಯದಿಂದ ಇಂತಹ ಲೋಕೋತ್ಕೃಷ್ಟವಾದ ಅದ್ಭುತ ಚಮತ್ಕಾರವನ್ನು ನೀನೇ ನಿನ್ನ ಕಣ್ಣಿನಿಂದ ನೋಡಿದರೂ ಕೂಡ ಹೇಳುತ್ತಿರುವೆ, ಮಹಾತ್ಮನು ಮೆಸ್ಮರಿಜಂ ವಿದ್ಯೆಯನ್ನರಿತಿರುವನೆಂದು ಇರಲಿ. ಮಹಾತ್ಮನು ಏನನ್ನಾದರೂ ತಿಳಿಬರಲಿ. ಅದರಿಂದ ನಿನಗೇನು ಬಾಧೆ? ಹೇಗಿದ್ದರೂ ಸ್ವಲ್ಪ ದಿನಗಳೊಳಗೇ ಆತನ ನುಡಿಯು ನಿಜವೇ ಸುಳ್ಳೇ, ಎಂಬುದು ನಿನಗೇ ತಿಳಿದೀತಲ್ಲವೇ?"

ನಾನು ಹೇಳಿದೆನು:—"ಹುಂ, ಇದು ನಿಜ. ಹತ್ತು-ಹದಿನೈದು ದಿನಗಳೊಳಗೆ ಆತನ ಒಂದು ಮಾತಿನ ನಿಜಾಂಶವು ತಿಳಿದು ಹೋಗುತ್ತದೆ. 'ಈಗ ನಿನಗೆ ವಿವಾಹ ಮುಹೂರ್ತವೇ ಇಲ್ಲ.' ಎಂಬ ಮಹಾತ್ಮನ ನುಡಿಯೂ ಕೂಡ ನನಗೀಗ ವಿವಾಹವಾಯಿತೆಂದರೆ ಸುಳ್ಳೇ ಆಗುವದು. ಆ ಸಮಯದಲ್ಲಿ ಆ ದೃಶ್ಯವೆಲ್ಲವೂ ನಿಜವೆಂದೇ ತಿಳಿದುಬಿಟ್ಟಿದ್ದೆನು; ಆದರೆ ಈಗ ಅದೆಲ್ಲವೂ ಆ ಮಾಯಾವಿಯ ಮಾಯೆಯೇ ಸರಿಯೆಂದು ಊಹಿಸುತ್ತಿದ್ದೇನೆ. ಯಾರೆದುರಿಗಾದರೂ ತನ್ನ ಮಾಯಾಸಾಮರ್ಥ್ಯದಿಂದ ಕಾಲ್ಪನಿಕವಾದ ಚಿತ್ರವನ್ನಿಟ್ಟು ತೋರಿಸಬಲ್ಲವನವನು; ಆದರೆ ಆತನ ತೋರಿಸಿದ ಚಿತ್ರವು ಮಾತ್ರ ನಿಜವಾದುದು. ಆ ಚಿತ್ರವು ನನ್ನ ಮುಂದಿನ ಜೀವನಕ್ಕೆ ಸಂಬಂಧಿಸಿದುದೆಂಬದನ್ನು ಮಾತ್ರ ನಂಬಲಾರೆನು ಹತ್ತು-ಹದಿನೈದು ದಿವಸಗಳೊಳಗೆ ನಿಜಸ್ಥಿತಿಯನ್ನು ನಾವೇ ನೋಡಬಹುದು. ಆತನು ಸಿದ್ಧಪುರುಷನು, ತ್ರಿಕಾಲಜ್ಞಾನಿಯು, ಮಹಾತ್ಮನು ಎಂಬುದನ್ನು ಕಾಲವೇ ತೋರಿಸೀತು; ಆದರೆ ಆ ಮನುಷ್ಯನಲ್ಲಿ ಏನೋ ಒಂದು ವಿಶೇಷ ಗುಣವಿದೆಯೆಂಬುವದನ್ನೇನೋ ಸ್ವೀಕರಿಸುತ್ತೇನೆ."

ರಾಮಚಂದ್ರನು ಹೇಳಿದನು:—"ಒಳ್ಳೇದು. ಇಷ್ಟನ್ನಾದರೂ ಒಪ್ಪುವೆಯಲ್ಲವೆ? ಉಳಿದುದನ್ನು ಕಾಲವೇ ನಿನ್ನನ್ನು ಒಪ್ಪುವಂತೆ ಮಾಡುವುದು."

ನಾನು ಮನೆಗೆ ಹಿಂದಿರುಗಿದೆನು. ರಾತ್ರಿಯ ಎರಡನೇ ಯಾಮವಾಗಿದ್ದಿತು ಆಗ. ಆಗಲೂ ಕೂಡ ನಮ್ಮ ಮನೆಯಲ್ಲಿ ವಿವಾಹಕ್ಕಾಗಿ ಏನೇನೋ ಕೆಲಸಗಳನ್ನು ಮಾಡುತ್ತಿದ್ದರು. ನಾನು ಮನೆಗೆ ತಲ್ಪಿದೊಡನೆ ಯಾವಾಗ ವಿವಾಹವೆಂಬುದನ್ನೂ, ಆ ಮೂವರಲ್ಲಿ ಯಾವ ಹುಡುಗಿಯು ನಿಶ್ಚಯಿಸಲ್ಪಟ್ಟಳೆಂಬುದನ್ನೂ ನನಗೆ ಹೇಳಿದರು ಎಲ್ಲವೂ ನಿಶ್ಚಯವಾಯಿತು. ನಾನು ಮಹಾತ್ಮನ ಯಾವ ಸಂಗತಿಯನ್ನೂ ಯಾರ ಹತ್ತಿರವೂ ಹೇಳಲಿಲ್ಲ. ನಾನಲ್ಲಿ ನೋಡಿದ್ದ ಆ ಸುಂದರಿಯ ಚಿತ್ರವನ್ನೇ ಧ್ಯಾನಿಸುತ್ತ ಮಲಗಿಕೊಂಡೆನು. ಮೆಲ್ಲಮೆಲ್ಲನೆ ನಿದ್ರೆಯೂ ಬಂದಿತು.

೪

ಯಾರದೋ ಕೂಗನ್ನು ಕೇಳಿ ಬೆಳಗಿನ ಜಾವದಲ್ಲಿಯೇ ಎಚ್ಚತ್ತೆನು. "ಮಧುರ-ಮಧುರ, ಏಳು-ಏಳು."

ನಾನೆದ್ದು ಕುಳಿತೆನು. ಹತ್ತರದಲ್ಲಿಯೇ ನಿಂತಿದ್ದ ತಾಯಿಯನ್ನು ನೋಡಿದೆನು. ನಾನು ಕೇಳಿದೆನು:—'ಏನಮ್ಮಾ, ಏನು?'

ಆಕೆಯು ಹೇಳಿದಳು:-"ಮಗೂ, ತಂತಿಯವನು ಬಂದಿದ್ದಾನೆ. ರುಜು ಹಾಕಿ ತಂತಿಯನ್ನು ತೆಗೆದುಕೋ"

ತಂ॥! ತಂತೀವಾರ್ತೆ! ಎಂತಹ ತಂತೀ ವಾರ್ತೆ? ಎಲ್ಲಿಂದ ಬಂದಿತು? ಯಾರು ಕಳುಹಿಸಿದರು? ಕೇಳದೊಡನೆ ಗಾಬರಿಯಾದೆನು. ಮನಸ್ಸಿಗೆ ಭಯವಾಯಿತು. ಒಡನೆ ಮಹಾತ್ಮನಾಡಿದ ಮಾತು ನೆನಪಾಯಿತು. ಮಹಾತ್ಮನು ಹೇಳಿದ್ದನು "ಪ್ರಯತ್ನಪಟ್ಟರೂ ವಿವಾಹವೀಗ ಆಗಲಾರದು" ಎಂದು. ಈ ತಂತೀವಾರ್ತೆಯು ಏನೋ ವಿಘ್ನ ಹೊತ್ತುಕೊಂಡು ಬಂದು ಬಿಟ್ಟಿರುವುದೇ?

ಈ ರೀತಿಯಾಗಿ ನನ್ನ ಮನಸ್ಸಿನ ದುರ್ಬಲತೆಯನ್ನು ನೋಡಿ ನಾನೇ ನಕ್ಕುಬಿಟ್ಟೆನು. ನನ್ನ ಮನಸ್ಸಿನ ಭಾವವನ್ನು ಮುಚ್ಚಿಕೊಂಡು ತಾಯಿಯನ್ನು ಕೇಳಿದೆನು: "ಏನಮ್ಮಾ. ತಂದೆಯು ಮನೆಯಲ್ಲಿಲ್ಲವೆ?"

ಆಕೆಯು ಹೇಳಿದಳು:—"ಇಲ್ಲ. ಸ್ವಲ್ಪ ಮುಂಚೆ ಎದ್ದು ವಿವಾಹ ಮುಹೂರ್ತದ ವಿಷಯದಲ್ಲೇನೋ ಮಾತನಾಡಿಕೊಂಡು ಬರಲು ಜೊಯಿಸರ ಮನೆಗೆ ಹೋದರು" ನಾನೆದ್ದು ಹೊರಗೆ ಬಂದೆನು. ರುಜು ಮಾಡಿ ತಂತೀ ಕಾಗದವನ್ನು ತೆಗೆದುಕೊಂಡು ಓದಿದೆನು. ಅದರಲ್ಲಿ ಹೀಗಿತ್ತು:—

"ತಂದೆಯು ಹಾಸಿಗೆ ಹಿಡಿದಿದ್ದಾನೆ. ಹಾಸಿಗೆಯಿಂದೇಳುವ ಆಶೆಯೇ ತೋರುವದಿಲ್ಲ. ತಂತಿ ನೋಡಿದೊಡನೆಯೇ ನೀನು ಹೊರಟು ಬರಬೇಕು.

ಲಕ್ಷ್ಮೀಕಾಂತ"

ನಾನಿದ್ದ ಕಾರ್ಖಾನೆಯ ಯಜಮಾನರ ಮಗನಾದ ಲಕ್ಷ್ಮೀಕಾಂತನು ಆ ತಂತಿಯನ್ನು ಕಳುಹಿಸಿದ್ದನು. "ಇದೇನು! ಅಕಸ್ಮಾತ್ತಾಗಿ ನಮ್ಮ ಕಾರ್ಖಾನೆಯ ಯಜಮಾನನಿಗಾಗಿದೆ? ನಾನು ಒಂದು ತಿಂಗಳ ರಜೆಯನ್ನು ತೆಗೆದುಕೊಂಡು ಹೊರಟು ಬರುವಾಗ ಯಜಮಾನನು ಆರೋಗ್ಯವಾಗಿ ದೃಢವಾಗಿದ್ದನು. ಬರುವಾಗ ನನ್ನ ಹತ್ತರ ಹೇಳಿದ್ದನು: "ಮಧುರ, ಸಾಧ್ಯವಾದಷ್ಟು ಬೇಗನೆ ಹಿಂದಿರುಗಿ ಬಾ. ನಿನಗೆ ತಿಳಿದೇ ಇದೆ, ನಿನ್ನಷ್ಟು ಇಲ್ಲಿ ಯಂತ್ರದ ಮಾಹಿತಿ ಇರುವವನು ಇನ್ನ್ಯಾರೂ ಇಲ್ಲವೆಂದು."

"ಏನಾದರೂ ಯಂತ್ರದ ದುರ್ಘಟನೆಯೊದಗಿತೇ? ಯಾವುದಾದರೂ ದೊಡ್ಡ ರೋಗಕ್ಕೆ ತುತ್ತಾದನೆ?" ಈ ರೀತಿ ಯೋಚಿಸುತ್ತಾ ತಲೆಯ ಮೇಲೆ ಕೈಯಿಟ್ಟುಕೊಂಡು ಕ್ಷಣಕಾಲ ನಿಂತಲ್ಲಿಯೇ ನಿಂತು ಬಿಟ್ಟೆನು. ನನ್ನ ಯಜಮಾನನ ಸೌಜನ್ಯವನ್ನೂ, ಕೆಲಸಗಾರರಲ್ಲಿರುವ ಪ್ರೀತಿ-ವಿಶ್ವಾಸವನ್ನೂ, ದಯೆಯನ್ನೂ, ಗಾಂಭೀರ್ಯವನ್ನೂ, ಕಾರ್ಯಕೌಶಲ್ಯವನ್ನೂ ಯೋಚಿಸಿ, ನನ್ನ ಕಣ್ಣುಗಳು ನೀರು ತುಂಬಿದವು. ನಾನು ಮನೆಯೊಳಗೆ ಬರದೆ, ಹೊರಗೇ ಸುಮ್ಮನೆ ನಿಂತದ್ದನ್ನು ನೋಡಿ ನನ್ನ ತಾಯಿಯು ಕೂಗಿ ಕೇಳಿದಳು: "ಮಗೂ, ತಂತಿಯನ್ನು ಕಳುಹಿಸಿರುವರು ಯಾರು? ಎಲ್ಲಿಂದ ಬಂದಿದೆ?"

ನಾನು ತಾಯಿಯ ಹತ್ತರ ಹೋಗಿ ತಂತಿಯ ಸಂಗತಿಯನ್ನು ತಿಳಿಸಿದೆನು. ಆಕೆಯು ಗಾಬರಿಯಾಗಿ, ಚಿಂತೆಯಿಂದ ಹೇಳಿದಳು:—"ಇದೇನೋ ಒಂದು ಘೋರವಾದ ಅನಿಷ್ಟವು ಒದಗಿದೆ; ಆದರೆ ನೀನೀಗ ಅಲ್ಲಿಗೆ ಹೋಗಲಾಗುವದಿಲ್ಲ; ಅಲ್ಲಿಗೆ ಬೇರೆ ಯಾರನ್ನೀಗ ಕಳುಹಿಸುತ್ತೀ?"

ನಾನು ಹೇಳಿದೆನು:—"ಅಲ್ಲಿಗೀಗ ನಾನೇ ಹೋಗುವದು ಅಗತ್ಯವಾಗಿದೆ; ಯಾಕಂದರೆ, ಕಾರ್ಖಾನೆಯಲ್ಲಿ ಯಂತ್ರ ನಡೆಸುವದನ್ನು ಚೆನ್ನಾಗಿ ತಿಳಿದವರು ನಾನು ಮತ್ತು ಕಾರ್ಖಾನೆಯ ಯಜಮಾನನು ಮಾತ್ರ ಬೇರೆಯವರೀಗಲ್ಲಿಗೆ ಹೋದರೇನು ಪ್ರಯೋಜನ? ಅಲ್ಲದೆ ಯಜಮಾನನ ಮಗನು ನನ್ನನ್ನೇ ಬರಲು ತಿಳಿಸಿರುವನು."

ತಾಯಿಯು ಹೇಳಿದಳು:—"ಹಾಗಾದರೆ ಈಗ ಏನು ಮಾಡೋಣ? ವಿವಾಹದ ಎಲ್ಲ ಸಂಭಾರಗಳೂ ಸಿದ್ಧವಾಗಿವೆ. ನಿಶ್ಚಯಿಸಿದ ಈ ಮುಹೂರ್ತದಲ್ಲಿ ವಿವಾಹವು ಜರುಗದೆ ಇದ್ದರೆ, ನಾವಿಲ್ಲಿ ಮುಖ ತೋರಿಸಲು ಸಾಧ್ಯವೇ

ಇಲ್ಲ. ಖಂಡಿತವಾಗಿಯೂ ನೀನು ಅಲ್ಲಿಗೆ ಹೋಗಬೇಕೆಂದಿದ್ದರೆ ವಿವಾಹ
ವಾದ ನಾಲ್ಕನೇ ದಿನವೇ ಹೊರಡಬಹುದು."

ನಾನು ಹೇಳಿದೆನು—"ಅಮ್ಮಾ, ನೀನು ಹೇಳಿದಂತೆಯೇ ನಾನು ಮಾಡ
ಬಲ್ಲೆನು. ಚೆನ್ನಾಗಿ ಆನಂದವನ್ನು ಅನುಭವಿಸಿಯೇನು; ಆದರೆ ವಿಚಾರ
ಮಾಡು. ತಂತಿಯಲ್ಲಿ ಬರೆದಿದೆ – 'ಯಜಮಾನನು ತುಂಬಾ ಆಪತ್ತಿಗೆ ಸಿಲು
ಕಿದ್ದಾನೆ; ಆಪತ್ತಿನಿಂದ ಬಿಡುಗಡೆಯಾಗುವ ಆಶೆಯಿಲ್ಲ' ಎಂದು. ಇಂತಹ
ಸ್ಥಿತಿಯಿರುವಾಗ ವಿವಾಹಕ್ಕಾಗಿ ನಾನಿಲ್ಲಿ ನಿಲ್ಲುವುದು ಶೋಭಿಸೀತೇ? ಇದು
ವರೆಗೂ ಯಾವ ಯಜಮಾನನ ಉಪ್ಪನ್ನು ತಿಂದೆನೋ, ಆ ಯಜಮಾನನೀಗ
ಹಾಸಿಗೆ ಹಿಡಿದಿದ್ದಾನೆ; 'ಒಡನೆಯೇ ಬರಬೇಕು' ಎಂದು ತಂತಿ ಬಂದರೂ
ಕೂಡ ನಾನಿಲ್ಲಿ ನಿಂತು ವಿಲಂಬಿಸಿದರೆ, ಉಭಯ ಲೋಕಕ್ಕೂ ಭ್ರಷ್ಟನೆನಿಸು
ವೆನು. ನೀನೇ ಇದೆಲ್ಲವನ್ನೂ ವಿಚಾರಿಸಿ, ನಾನು ಮಾಡಬೇಕಾದುದನ್ನು
ಅಪ್ಪಣೆ ಮಾಡು."

ತಾಯಿಯು ಮುಂದೆ ಮಾತನಾಡದೆ ಸುಮ್ಮನಾದಳು. ಆಕೆಯು ಏನು
ತಾನೆ ಹೇಳಿಯಾಳು? ಸುಮ್ಮನಿದ್ದರೂ ಕೂಡ ಮುಖದ ಸ್ಥಿತಿಯಿಂದ ಮನಸ್ಸಿ
ನಲ್ಲಿ ಏನಿರುವುದೆಂಬದು ಹೊಳೆಯುತ್ತಿತ್ತು. ಬಹು ಕಾಲದಿಂದ ನನ್ನ ವಿವಾಹ
ದಲ್ಲಿ ಪ್ರಯತ್ನಿಸುತ್ತಿದ್ದಳು. ಇದುವರೆಗೂ ನಾನೇ ವಿವಾಹಕ್ಕೆ ತಡೆಯಾಗಿದ್ದೆನು.
ಹೇಗೋ ನಾನು ಈಗ ಒಪ್ಪಿರುವಾಗ ಅಕಸ್ಮಾತ್ತಾಗಿ ಇದೊಂದು ದೊಡ್ಡ ತಡೆ
ಯು ಒದಗಿತು. ಕಣ್ಣುಗಳು ನೀರಿನಿಂದ ತುಂಬಿದ್ದವು. ನಾನಲ್ಲಿ ನಿಲ್ಲಲಾರದೆ,
ಕಷ್ಟದಿಂದ ಮನಸ್ಸನು ಬಿಗಿಹಿಡಿದು ನನ್ನ ಕೋಣೆಯ ಕಡೆಗೆ ಹೋದೆನು.
ಅಲ್ಲಿ ಆರಾಮ ಕುರ್ಚಿಯ ಮೇಲೆ ಅರ್ಧ ಮಲಗಿಕೊಂಡು ಆಲೋಚಿಸಿದೆನು.
"ಆಶ್ಚರ್ಯವಾಗಿದೆ. ಅಕಸ್ಮಾತ್ತಾಗಿ ಇಂತಹ ದುಃಖದಾಯಕವಾದ ದುರ್ಘಟ
ನೆಯು ಹೇಗೆ ಒದಗಿತು? ಒಂದು ಗಂಟೆಗಿಂತ ಮೊದಲು ಇದು ಸಂಭವಿ
ಸೀತೆಂದು ಕನಸಿನಲ್ಲಿಯೂ ಊಹಿಸಿರಲಿಲ್ಲ. ರಾಮಚಂದ್ರನೊಡನೆ ಕುತೂಹಲ
ಕ್ಕಾಗಿ ಆ ಮಹಾತ್ಮನ ಹತ್ತಿರ ಹೋಗಿ, ಅವನಿಂದ ಯಾವ ಮಾತನ್ನು ಕೇಳಿ
ದ್ದೆನೋ ಅದೀಗ ನಿಜವಾಯಿತೆಂದು ತೋರುತ್ತದೆ. ಖಂಡಿತವಾಗಿಯೂ
ಮಹಾತ್ಮನಲ್ಲಿ ಇದೆ ಏನೋ ಒಂದು ವಿಶೇಷವಾದ ಶಕ್ತಿ. ನಾನೀಗ ತಿರುಗಿ ಆ
ಮಹಾತ್ಮನ ಹತ್ತಿರಕ್ಕೆ ಹೋಗಿ, ನಮ್ಮ ಕಾರ್ಖಾನೆಯ ಯಜಮಾನನ
ವಿಷಯದಲ್ಲಿ ಪ್ರಶ್ನೆ ಕೇಳಲೊ? ಆದರೆ ಮಹಾತ್ಮನು ತಿರುಗಿ ಭೇಟಿಗೆ ಬರಲಾಗ
ದೆಂದುಬಿಟ್ಟಿರುವನು. ಏನು ಮಾಡಲೀಗ?"

ಇಷ್ಟರಲ್ಲಿ ಜೊಯಿಸರ ಮನೆಗೆ ಹೋಗಿದ್ದ ತಂದೆಯು ಹಿಂದಿರುಗಿ

ಒಂದು ತಂತಿಯ ಸಂಗತಿಯನ್ನು ಕೇಳಿ ತಿಳಿದನು. ಕಾರ್ಖಾನೆಯ ಯಜಮಾನನಿಗೂ ನಮ್ಮ ತಂದೆಗೂ ಬಹಳ ಕಾಲದಿಂದ ಸ್ನೇಹವಿತ್ತು. ತಂತಿಯ ಸಮಾಚಾರವನ್ನು ಕೇಳಿ ತಂದೆಯ ಮನಸ್ಸು ಮರುಗಿತು. ದುಃಖವನ್ನು ನುಂಗಿಕೊಂಡು ವಿವಾಹದ ಸಾಮಗ್ರಿಗಳೆಲ್ಲ ವ್ಯರ್ಥವಾಗುವುವೆಂಬದನು ಎಣಿಸದೇನೆಯೇ ನನ್ನ ಹತ್ತರ ಹೇಳಿದನು:--"ಮಗೂ, ಮಧುರ, ನಿನಗೆ ತಿಳಿದೇ ಇದೆ—ಕಳೆದೆರಡು ತಿಂಗಳಿಂದ ವಿವಾಹ ವಿಷಯದಲ್ಲಿ ಪ್ರಯತ್ನವು ಜರುಗುತ್ತಲಿದೆ, ಈ ವಿಷಯದಲ್ಲಿ ಬೇಕಾದಷ್ಟು ಓಡಿಯಾಡಿ ಸಾಕಾಗಿದೆ. ಹಣವೂ ತಕ್ಕಮಟ್ಟಿಗೆ ಖರ್ಚಾಗಿದೆ; ಮತ್ತು ನಿನ್ನ ತಾಯಿಯೂ ಕೂಡ ನಿನ್ನ ವಿವಾಹ ವಿಷಯದಲ್ಲಿ ಎಷ್ಟು ಉತ್ಕಂಠಿತಳಾಗಿರುವಳೆಂಬುದು ನಿನಗೇನೂ ತಿಳಿಯದಿರುವ ಸಂಗತಿಯಲ್ಲ. ಈ ಮುಹೂರ್ತದಲ್ಲಿ ಈ ಶುಭ ಕಾರ್ಯವನ್ನು ಮುಗಿಸದೆ ಆಕೆಯು ಸುಮ್ಮನಿರುವದಿಲ್ಲ. ಆದರೂ ಕೂಡ ನಿನ್ನ ಕರ್ತವ್ಯವನ್ನು ತಿಳಿದಿರುವೆನು. ಈಗ ನೀನು ಈ ವಿವಾಹದ ವಿಚಾರವನ್ನು ಬಿಟ್ಟು ಕಲ್ಕತ್ತೆಗೆ ಹೋಗಲಿಚ್ಛೆಪಡುತ್ತಿದ್ದರೆ, ನಾನು ನಿನಗೆ ಅದರಲ್ಲಿ ತಡೆಯುಂಟು ಮಾಡಲಾರೆನು."

ನಾನು ಹೇಳಿದೆನು:—"ವಿವಾಹವು ಯಾವಾಗಲಾದರೂ ಆಗಬಹುದು. ಮರಣಶಯ್ಯೆಯಲ್ಲಿರುವ ಮನುಷ್ಯನು ಮಾತ್ರ ಶುಭ ಕೆಲಸವನ್ನಾಗಲಿ, ಅಶುಭ ಕೆಲಸವನ್ನಾಗಲಿ ಯಾವುದನ್ನೂ ಪ್ರತೀಕ್ಷಿಸಲಾರೆನು. ಈಶ್ವರನು ತೋರಿಸಿದ ದಾರಿಯಲ್ಲಿ ಹೋಗಬೇಕಾಗಿದೆ. ಇಂತಹ ಕಾಲದಲ್ಲಿ ನಾನಲ್ಲಿಗೆ ಹೋಗದೆ ಇಲ್ಲಿ ಸುಖಲೋಲುಪನಾಗಿ ಕುಳಿತರೆ, ಕರ್ತವ್ಯಕರ್ಮದಲ್ಲಿ ಭ್ರಷ್ಟನೆನಿಸದಿರಲಾರೆನು; ನನ್ನ ಉದ್ಯೋಗಕ್ಕೂ ತೊಂದರೆ ಬರಬಹುದು."

ತಂದೆಯು ಹೇಳಿದನು:-"ಹಾಗಾದರೆ ವಿಲಂಬಿಸದೆ ಹೊರಡು. ಮಧ್ಯಾಹ್ನದ ಎಕ್ಸ್‌ಪ್ರೆಸ್ ಬಂಡಿಗೇ ಹೊರಟುಬಿಡು. ಅಲ್ಲಿಗೆ ಹೋದೊಡನೆ ಅಲ್ಲಿನ ಸ್ಥಿತಿಯನ್ನು ತಿಳಿಸು. ಯಜಮಾನನಿಗೆ ಸ್ವಲ್ಪ ಗುಣಾಂಶವಿದ್ದರೆ ನೀನು ಬೇಗನೆ ಹಿಂದಿರುಗಿ ಬಾ. ಹಾಗಲ್ಲದೆ ವಿಪರೀತವೇ ಆದರೆ, ಅದನ್ನೂ ತಿಳಿಸು."

ಅದೇ ದಿನ ನಾನು ಕಲ್ಕತ್ತೆಗೆ ಹೊರಟೆನು. ಕಾರ್ಖಾನೆಯ ಕಛೇರಿಗೆ ಹೋದೊಡನೆಯೇ ಎಲ್ಲ ಸಂಗತಿಯೂ ತಿಳಿಯಿತು. ಯಜಮಾನನು ಕಾರ್ಖಾನೆಯನ್ನು ನೋಡಲು ಬಂದಿದ್ದ ಒಬ್ಬ ದೊಡ್ಡ ಮನುಷ್ಯನಿಗೆ ಯಂತ್ರವನ್ನು ತೋರಿಸುತ್ತ ಬರುತ್ತಿರುವಾಗ, ತಿರುಗುತ್ತಿದ್ದ ಒಂದು ಚಕ್ರವು ಅಕಸ್ಮಾತ್ತಾಗಿ ತಲೆಗೆ ತಗಲಿ ಬಿದ್ದುಬಿಟ್ಟನು. ಒಡನೆಯೆ ಹಾಹಾಕಾರವಾಗಿ, ಪ್ರಯತ್ನಪಟ್ಟು ಯಂತ್ರವನ್ನು ನಿಲ್ಲಿಸಿದಾಗ್ಯೂ ಕೂಡ, ದುರದೃಷ್ಟದಿಂದ ಆತನ ಕಾಲು

ಗಳೆರಡೂ ತುಂಡಾಗಿ ಹೋಗಿದ್ದವು. ಒಡನೆಯೇ ನೂರಾರು ಪ್ರಸಿದ್ಧ ಡಾಕ್ಟರು ಗಳು ಬಂದು ನೋಡಿದರು. ಪ್ರಾಣವು ನಿಲ್ಲುವಂತೆ ತೋರಲಿಲ್ಲ.

ಯಜಮಾನನು, ನಾನು ಇಬ್ಬರನ್ನು ಬಿಟ್ಟು ಬೇರೆ ಯಾರಿಗೂ ಯಂತ್ರ ನಡೆಸುವ ಮಾಹಿತಿಯು ಚೆನ್ನಾಗಿಲ್ಲವಾದುದರಿಂದ, ಕಾರ್ಖಾನೆಯ ಮುಂ-ದಿನ ಕೆಲಸಕ್ಕಾಗಿ ಯಜಮಾನನ ಮಗನು ನನಗೇ ತಂತಿ ಕಳುಹಿಸಿದ್ದನು.

ಈ ಎಲ್ಲ ಸಂಗತಿಯನ್ನು ತಂದೆಗೆ ತಂತಿಯ ಮೂಲಕವಾಗಿ ಒಡನೆಯೇ ತಿಳಿಸಿದೆನು. ಸದ್ಯದಲ್ಲಿ ಮನೆಗೆ ಹಿಂದಿರುಗುವದು ಸಾಧ್ಯವಿಲ್ಲವೆಂದೂ ತಿಳಿಸಿ ಬಿಟ್ಟೆನು. ಯಜಮಾನನು ಹನ್ನೊಂದು ದಿನಗಳವರೆಗೆ ಅದೇ ಸ್ಥಿತಿಯಲ್ಲಿದ್ದನು. ಮನುಷ್ಯ ಬುದ್ಧಿಗೆ ಎಷ್ಟು ಸಾಮರ್ಥ್ಯವಿರುವದೋ, ವೈಜ್ಞಾನಿಕರು ಏನೇನು ಕಂಡುಹಿಡಿದಿದ್ದರೋ ಅವೆಲ್ಲವೂ ನಮ್ಮ ಯಜಮಾನನ ಪಾಲಿಗೆ ವ್ಯರ್ಥ ವಾದವು. ಕುಬೇರನಂತಿದ್ದ ತಂದೆಗಾಗಿ ಲಕ್ಷ್ಮೀಕಾಂತನು ಹಣವನ್ನು ನೀರಿ ನಂತೆ ಖರ್ಚು ಮಾಡಿದನು; ಆದರೆ ದುರದೃಷ್ಟವೊಂದು ಎಲ್ಲದರ ಮೇಲೂ ನಿಂತಿದ್ದಿತು. ಹನ್ನೆರಡನೆಯ ದಿನ ಯಜಮಾನನ ಪ್ರಾಣಗಳು ಹೊರಟು ಹೋದವು. ಆ ಮೇಲೆ ಕೆಲವು ದಿನಗಳು ಹೇಗೋ ಕಷ್ಟದಿಂದ ಕಳೆದು ಹೋದವು.

ಯಜಮಾನನ ಮಗನು ಸ್ವಾಭಾವಿಕವಾಗಿ ಚತುರನಿದ್ದನು. ತಂದೆಯು ಸಾಯುವದಕ್ಕಿಂತ ಮುಂಚೆಯೇ ಕಾರ್ಖಾನೆಯ ಬಹು ಭಾಗದ ಕೆಲಸವನ್ನು ತಾನೇ ನಿರ್ವಹಿಸಿ ನಡೆಸುತ್ತಿದ್ದನು. ಈಗ ನನ್ನ ಆಲೋಚನೆಯಂತೆ ಕಾರ್ಖಾ ನೆಯನ್ನು ಹೊಸ ರೀತಿಯಿಂದ ತುಂಬಾ ವ್ಯವಸ್ಥೆಗೊಳಿಸಿ, ನನ್ನನ್ನು ಕಾರ್ಖಾ ನೆಯ ಮುಖ್ಯ ಮೇನೇಜರನ್ನಾಗಿ ಮಾಡಿದನು. ಈ ಮಧ್ಯದಲ್ಲಿ ನಾನು ಅಲಹಾಬಾದಿಗೆ ಹೋಗಿಯೇ ಇರಲಿಲ್ಲ. ವಾರವಾರಕ್ಕೂ ತಂದೆಯ ಕ್ಷೇಮ ಸಮಾಚಾರದ ಕಾಗದಗಳು ಬರುತ್ತಿದ್ದವು. ರಾಮಚಂದ್ರನು ಬರೆದಿದ್ದನು:— "ನಿನಗೆಂದು ಆರಿಸಿದ್ದ ಮೂವರು ಹುಡಿಗಿಯರಿಗೂ ಬೇರೆ ಬೇರೆ ಕಡೆಗಳಲ್ಲಿ ವಿವಾಹವು ನಡೆದು ಹೋಯಿತು" ಎಂದು.

ಅದರಿಂದ ನನಗೆ ಸ್ವಲ್ಪವೂ ಖೇದವುಂಟಾಗಲಿಲ್ಲ.

ನನ್ನ ತಾಯಿಯು ತಿರುಗಿ ನನ್ನ ವಿವಾಹಕ್ಕಾಗಿ ಪ್ರಯತ್ನಿಸುತ್ತ ಇದ್ದಾ ಳೆಂದೂ ಮುಂದಿನ ವರ್ಷದ ಮೊದಲನೇ ತಿಂಗಳಲ್ಲಿಯೇ ನನ್ನ ವಿವಾಹ ವಾಗಲು ನಿರ್ಧರಿಸಲ್ಪಡುವದಾಗಿಯೂ ರಾಮಚಂದ್ರನು ಅದೇ ಕಾಗದದಲ್ಲಿ ಬರೆದಿದ್ದನು. ಮಹಾತ್ಮನ ಗುಡಸಿಲಿಗೆ ನಾನೂ ರಾಮಚಂದ್ರನೂ ಹೋದುದು, ಮತ್ತು ಅಲ್ಲಿ ಮಹಾತ್ಮನ ಅನುಗ್ರಹದಿಂದ ಅದ್ಭುತ ದೃಶ್ಯಗಳನ್ನು ನಾನು

ನೋಡಿದುದು ಅದಾವುದನ್ನೂ ನಾನು ಮರೆತಿರಲಿಲ್ಲ; ಮರೆಯಲು ಸಾಧ್ಯವೂ ಇರಲಿಲ್ಲ. ಏನೋ ಕುತೂಹಲಕ್ಕಾಗಿಯೇ ನಾನು ಆ ಮಹಾತ್ಮನ ಹತ್ತಿರ ಹೋಗಿದ್ದೆನು. ಅಪನಂಬಿಕೆಯಿಂದಲೇ ಮಹಾತ್ಮನ ಉತ್ತರವನ್ನು ಕೇಳಿದ್ದೆನು. ಆದರೂ ಯಾವದಿನ ಮೊದಲ್ಗೊಂಡು ಮಹಾತ್ಮನ ಮಾತುಗಳಲ್ಲೊಂದಂಶವು ನಿಜವೆಂದು ತೋರಿ ಬಂದಿತೋ, ಅಂದಿನಿಂದಲೆ ಮಹಾತ್ಮನಲ್ಲಿ ಒಂದು ವಿಧವಾದ ವಿಶ್ವಾಸವುಂಟಾಗಲಾರಂಭವಾಯಿತು. ಇಂತಹ ಸಿದ್ಧಪುರುಷರು ಈಗಿನ ಕಾಲದಲ್ಲಿ ತುಂಬಾ ವಿರಳರು. ಅದೃಷ್ಟದಿಂದಲೇ ಇಂತಹ ಮಹಾತ್ಮರ ಭೇಟಿಯು ದೊರಕುವದು. ಸಾಂಸಾರಿಕ ಜನರಲ್ಲಿಯೂ ಅಂತಹ ಸಾಧುಗಳ ನಿಜವಾದ ಪರಿಚಯವುಳ್ಳವರು ಕಡಿಮೆ. ಅಂತಹ ಮಹಾತ್ಮರು ಅಕಸ್ಮಾತ್ತಾಗಿ ಎಲ್ಲಿಯೋ ಪ್ರಕಟವಾಗುತ್ತಾರೆ. ನಾನು ನೋಡಿದ್ದ ಆ ಮಹಾತ್ಮನು ಈಗೆಲ್ಲಿರುವನೋ ತಿಳಿಯಲಸಾಧ್ಯವೇ ಸರಿ. ಈ ವರ್ಷವಾದ ಮೇಲೆ ಯಾವ ಹುಡುಗಿಯು ನನಗೆ ವಿವಾಹವಾಗುತ್ತಾಳೆಂದು ಹೇಳಿದ್ದನೋ, ಅದು ನಿಜವಾಗುವುದೇ ಇಲ್ಲವೆ? ಎಂಬುದನ್ನೊಂದನ್ನು ತಿಳಿಯಲು ತುಂಬಾ ಕುತೂಹಲವೂ, ತವಕವೂ ಇದ್ದಿತು. ಇರಲಿ ಒಂದು ವರ್ಷದ ಕಾಲವು ಅಷ್ಟೇನೂ ಹೆಚ್ಚಿನದಲ್ಲ. ಮಹಾತ್ಮನ ಒಂದು ಮಾತು ನಿಜವೆಂದರಿತ ಬಳಿಕ, ಉಳಿದ ನುಡಿಯೂ ನಿಜವೇ ಆದೀತೆಂದು ತೋರುತ್ತದೆ.

ಕೆಲವು ತಿಂಗಳುಗಳು ಕಳೆದವು. ನನ್ನ ಹೃದಯದಲ್ಲಿ ಆಶೆಯೂ, ನಿರಾಶೆಯೂ ಪರಸ್ಪರವಾಗಿ ಹೊಡೆದಾಡುತ್ತಿದ್ದವು. ಹೀಗೆಯೇ ಕೆಲವು ಕಾಲ ಕಳೆಯಿತು.

ಆದರೆ ಮಹಾತ್ಮನ ಗುಡಸಿಲಿನಲ್ಲಿ ನೋಡಿದ್ದ ಆ ಸುಂದರಿಯ ರೂಪವನ್ನು ಮಾತ್ರ ನಾನು ಸ್ವಲ್ಪವಾದರೂ ಮರೆಯಲಿಲ್ಲ.

ಆ ಮೇಲೆ ಒಂದು ದಿನ ಅಕಸ್ಮಾತ್ತಾಗಿ, ನಿಜವಾಗಿ, ವಾಸ್ತವಿಕವಾಗಿ ಹಿಂದೆ ನೋಡಿದ್ದ ದೃಶ್ಯವೇ ನನ್ನ ಕಣ್ಣೆದುರಿಗೆ ಬಂದಿತು ಯಾವಾಗ? ಹೇಗೆ? ಎಂಬುದನ್ನೇ ಮುಂದೆ ಹೇಳುತ್ತೇನೆ.

೫

ಕಾರ್ಖಾನೆಗೆ ಸಂಬಂಧಿಸಿದ ಒಂದು ವಿಶೇಷ ಕೆಲಸಕ್ಕಾಗಿ ನಾನು ಪಾಟ್ನಾಕ್ಕೆ ಹೋಗಬೇಕಾಗಿ ಬಂದಿತು.

ನಾನು ಅಲ್ಲಿಗೆ ಹೊರಡುವದಕ್ಕಿಂತ ಮುಂಚೆಯೇ ನನ್ನ ತಾಯಿಯದೊಂದು ಕಾಗದವು ಬಂದಿತ್ತು. ಅದು ಹೀಗಿದ್ದಿತು:—

“ಚಿರಂಜೀವಿ ಮಧುರನಿಗೆ, ಆಶೀರ್ವಾದಗಳು.

ಮಗೂ, ನಾವೆಲ್ಲರೂ ಇಲ್ಲಿ ಕ್ಷೇಮದಿಂದಿರುತ್ತೇವೆ. ನಿನಗೊಂದು ಅಗತ್ಯವಾದ ಸಂಗತಿಯನ್ನು ತಿಳಿಸಲೋಸುಗ ನಿನಗೀಗ ಕಾಗದ ಬರೆಯುತ್ತಿದ್ದೇನೆ. ನಿನಗೆ ತಿಳಿದೇ ಇದೆ-ಕಳೆದ ವರ್ಷದಲ್ಲಿ ನಿನ್ನ ವಿವಾಹಕ್ಕೆ ಸಾಮಗ್ರಿಗಳೆಲ್ಲವೂ ಸಿದ್ಧವಾಗಿರುವಾಗಲೇ ಅಕಸ್ಮಾತ್ತಾಗಿ ದುರ್ಘಟನೆಯೊಂದೊದಗಿ ನಿನ್ನ ವಿವಾಹಕ್ಕೆ ತಡೆಯುಂಟಾಯಿತು. ಆದ್ದರಿಂದ ಈಗ ಬರುವ ಮೊದಲನೇ ಮುಹೂರ್ತದಲ್ಲಿಯೇ ಈ ವಿವಾಹ ಕಾರ್ಯವು ಸಂಪೂರ್ಣವಾಗಬೇಕೆಂದು ಬಯಸುತ್ತೇನೆ. ಈ ಸಾರಿ ಮಾತ್ರ ನಿನ್ನ ಯಾವ ವಿಧವಾದ ತಡೆಯನ್ನೂ ನನ್ನೆದುರಿಗೆ ತೋರಿಸಲಾಗದು. ಆದಕ್ಕಾಗಿ ಈಗಲೆ ಸೂಚಿಸುತ್ತೇನೆ. ಸತ್ಕುಲಪ್ರಸೂತಳಾದ, ಶಿಕ್ಷಿತಳಾದ, ಸುಂದರಿಯಾದ ಹುಡುಗಿಯನ್ನು ನಿನಗಾಗಿ ನಿರ್ಧರಿಸಿರುವೆನು. ಹುಡುಗಿಯು ಇದೇ ಊರಿನವಳು. ಈ ಬಾರಿಯಾದರೂ ನನ್ನ ಮಾತನ್ನು ಪೂರ್ಣಗೊಳಿಸುವಿಯಾಗಿ ನಂಬಿರುತ್ತೇನೆ. ಈ ಸಾರಿಯೂ ಕೂಡ ನೀನೇನಾದರೂ ಮೋಸಮಾಡಿ ತಡೆಯುಂಟುಮಾಡಿದರೆ, ನನಗೆ ಖಂಡಿತವಾಗಿಯೂ ತುಂಬಾ ವ್ಯಸನವಾಗುವುದು. ಅವಕಾಶವಿದ್ದರೆ, ಎರಡು-ಮೂರು ದಿನವಾದರೂ ಇಲ್ಲಿಗೆ ಬಂದಿದ್ದು ಹೋಗಲು ಪ್ರಯತ್ನಿಸು. ನಿನಗೆ ತೋರಿಸುವದಕ್ಕಾಗಿ ಹುಡುಗಿಯ ಫೋಟೋವನ್ನು ತರಿಸಿ ಇಟ್ಟಿರುತ್ತೇನೆ. ವಿಶೇಷವೇನೂ ಇಲ್ಲ. ನಿನ್ನ ತಾಯಿ.”

ಈ ಕಾಗದವನ್ನು ನೋಡಿ ನನಗೆ ಆಶ್ಚರ್ಯವೆನಿಸಿತು. ಆಲೋಚಿಸಿದೆನು:—“ಇಷ್ಟು ದಿವಸಗಳು ಕಳೆದವು; ಆದರೂ ಕೂಡ ನನಗೆ ವಿವಾಹ ಮಾಡಿಸುವ ಆಗ್ರಹವಿನ್ನೂ ನನ್ನ ತಾಯಿಗೆ ಹೋಗಲಿಲ್ಲ. ಈ ಸಾರಿಯಾದರೂ ತಾಯಿಯ ಮಾತನ್ನು ನಡೆಯಿಸಬೇಕು; ಆದರೆ ಆ ಮಹಾತ್ಮನು ಹೇಳಿದ ನುಡಿಯು ಪೂರ್ಣವಾಗದೆ ಇರುವದೇ? ಮಹಾತ್ಮನಾದರೋ ನನ್ನ ಮುಂದಿನ ಹೆಂಡತಿಯು ಬೇರೆ ಸ್ಥಳದವಳೆಂಬುದನ್ನು ನನಗೆ ತೋರಿಸಿದಂತೆ ನೆನಪಿದೆ. ತಾಯಿಯು, ಹುಡುಗಿಯು ಪ್ರಯಾಗದವಳೆಂದೇ ಬರೆದಿರುವಳು. ಇದು ಹೇಗೆ? ಆಗಲಿ, ನೋಡುತ್ತೇನೆ ನನ್ನ ಹಣೆಯಲ್ಲಿ ಏನು ಅದೃಷ್ಟವಿರುವುದೆಂದು. ಮಹಾತ್ಮನ ಮಾತು ವ್ಯರ್ಥವಾದೀತೆಂದು ನಾನು ನಂಬಲಾರೆನು.”

ನಾನು ಕಾರ್ಖಾನೆಯ ಕೆಲಸಕ್ಕಾಗಿ ಪಾಟ್ಣಾಕ್ಕೆ ಹೋದೆನು. ಅಲ್ಲಿ ಆ ಕೆಲಸವನ್ನು ಮುಗಿಸಿ ಹೊರಡಲು ಹದಿನೈದು ದಿವಸಗಳು ಬೇಕಾದವು. ಕೆಲಸವು ಪೂರೈಸಿದೊಡನೆ ಅಲ್ಲಿಂದ ಕ್ವಿಲನ್ ಮಾರ್ಗವಾಗಿ ಹಿಂದಿರುಗಿದೆನು. ಜನರ ಗಲಭೆಯಿರಬಾರದೆಂದು ನಾನು ಸೆಕೆಂಡ್‌ಕ್ಲಾಸಿನ ಗಾಡಿಯಲ್ಲಿ ಪ್ರಯಾಣ ಮಾಡಹತ್ತಿದೆನು.

ಹಿಂದಿರುಗಿ ಕಲ್ಕತ್ತೆಗೆ ರೈಲಿನಿಂದ ಹೊರಟೆನು. ಕ್ವಿಲನ್ ಸ್ಟೇಶನ್ ಸಿಕ್ಕಿತು. ಹತ್ತು ನಿಮಿಷಗಳ ಕಾಲ ರೈಲು ಅಲ್ಲಿ ನಿಲ್ಲುವುದೆಂದು, ರೈಲಿನಿಂದ ಕೆಳಗಿಳಿದು ಅತ್ತಿತ್ತ ನೋಡಿದೆನು; ಆದರೆ....ಇವೇನು! ಎಲ್ಲಿಯೋ ಆ ಸ್ಟೇಶನ್ನನ್ನು ನಾನು ನೋಡಿದಂತೆ ಇದೆ. 'ಓಹೋ! ನೆನಪಾಯಿತು, ನೆನಪಾಯಿತು.' ನೆನಪಾದೊಡನೆ ಅಪರಿಮಿತವಾದ ಆಶ್ಚರ್ಯವುಂಟಾಯಿತು. ಆ ಆಶ್ಚರ್ಯದ ಭರದಲ್ಲಿ ಕ್ಷಣಕಾಲ ಮನಸ್ಸು ಕಲಕಿಹೋಯಿತು. "ಮುಂಚೆ ನಾನು ಮಹಾತ್ಮನೆದುರಿನಲ್ಲಿ ಮಣ್ಣಿನ ಹೆಂಟೆಯಲ್ಲಿ ಕಂಡಿರುವ ಸ್ಟೇಶನ್ನೇ ಇದು. ಸಂಶಯವಿಲ್ಲವೇ ಇಲ್ಲ. ಅವೇ ಸ್ಥಳವಿದು. ನಾನು ಆ ಕಾಲದಲ್ಲಿ ಚೆನ್ನಾಗಿ ನೋಡಿರುವೆನು. ಒಂದು ಪಕ್ಕದಲ್ಲಿ ಇವೇ ರೀತಿಯ ಕೋಣೆಗಳು. ಸ್ವಲ್ಪ ಮುಂದೆ ಇವೇ ರೀತಿ ಇನ್ನೊಂದು ಕಡೆಗೆ ಹೋಗುವ ರೈಲುದಾರಿ. ಎಲ್ಲಾ ಅದೇ ನೋಟ; ಆಶ್ಚರ್ಯ! ಮಹಾತ್ಮನ ಶಕ್ತಿಯು ಎಷ್ಟು ಅಪಾರವಾದುದು? ನಿಜ! ನಿಜ! ಮಹಾತ್ಮರು ಏನನ್ನು ಬೇಕಾದರೂ ಮಾಡಬಲ್ಲರು. ನಿಜವಾಗಿಯೂ ಅದೇ ದೃಶ್ಯವು ಎದುರಿಗಿದೆ. ಹೀಗೆಯೇ ಅಲ್ಲಿ ನೋಡಿದ ಸುಂದರಿಯೂ ಎದುರಿಗೆ ಬರುವಳೊ? ಮಹಾತ್ಮನ ಈ ಮಾತಿನ ಒಂದಂಶವು ಪೂರ್ಣವಾಗಿದೆ; ಉಳಿದ ಅಂಶವೂ ಪೂರ್ಣವಾಗಲಾರದೇ?"

ನಾನು ಕುತೂಹಲದಿಂದ ಪ್ಲಾಟ್‌ಫಾರಮ್ಮಿನಲ್ಲಿ ಅತ್ತಿತ್ತ ನೋಡುತ್ತಾ, ಸ್ವಲ್ಪ ಮುಂದೆ ಇರುವ ಇನ್ನೊಂದೆಡೆಗೆ ಹೋಗುವ ರೈಲು ದಾರಿಯ ಹತ್ತಿರ ಹೋದೊಡನೆಯೇ ಥಟ್ಟನೆ ನಿಂತುಬಿಟ್ಟೆನು. ಮುಂದುಗಡೆಯಿರುವ ದೃಶ್ಯವನ್ನು ನೋಡಿದೊಡನೆಯೇ ಕ್ಷಣಕಾಲ ನಾನು ಏನೇನೋ ಆಗಿಬಿಟ್ಟೆನು! ನನ್ನ ಕಣ್ಣಿನ ಮೇಲೆಯೇ ನನಗೆ ಅಪನಂಬಿಗೆಯುಂಟಾಯಿತು. ಕಣ್ಣುಗಳನ್ನೊಂದು ಬಾರಿ ತಿಕ್ಕಿಕೊಂಡು ಸರಿಯಾಗಿ ತೆರೆದು ನೋಡಿದೆನು; ಚನ್ನಾಗಿ ನೋಡಿದೆನು. ಆಗಲೂ ಅವೇ ಸುಂದರಿಯು ನನಗೆದುರಾಗಿ ಬರುತ್ತಿದ್ದಂತೆ ಕಂಡೆನು.

"ನಾನು ಹಿಂದೆ ಮಹಾತ್ಮನೆದುರಿನಲ್ಲಿ ನೋಡಿದ ಸುಂದರಿಯೇ ಇವಳಿರಬಹುದೇ?'' ಎಂದುಕೊಂಡೆನು. ತಿರುಗಿ ಕಣ್ಣುಗಳನ್ನು ತಿಕ್ಕಿ ನೋಡಿದೆನು. ಆಕೆಯೇ ಇವಳೆಂದು ಚನ್ನಾಗಿ ನೋಡಿ ನಿರ್ಧರಿಸಿದೆನು. ಅದೇ ಹಳದೀ ಬಣ್ಣದ ಬೆಲೆ ಬಾಳುವ ಸೀರೆ, ಅದೇ ಬಿಳೀ ಕುಪ್ಪಸ. ಅದೇ ಮಂದವಾದ ನಡಿಗೆ. ಅದೇ ಮೂಗು. ''ಈಕೆಯು ಎಲ್ಲಿಂದ ಬಂದಳು? ನಾನು ಕನಸನ್ನು ಕಾಣುತ್ತಿರುವೆನೇ?''

ನಾನೀ ಮೇರೆಗೆ ನೋಡುತ್ತಿರುವಾಗಲೇ ಆಕೆಯು ಮುಂದೆ ನಡೆದು, ನಾನು ಮೊದಲು ಕುಳಿತಿದ್ದ ಎರಡನೇ ತರಗತಿಯ ಗಾಡಿಯನ್ನೇ ಏರಿ ಕುಳಿತು

ಕೊಂಡಳು. ಆಕೆಯ ಜೊತೆಯಲ್ಲಿ ಸಮುಜ್ವಲ ವೇಷ-ಭೂಷಣಗಳಿಂದ ಕೂಡಿದ ಇನ್ನೊಬ್ಬ ಪ್ರೌಢಳಾದ ಹೆಂಗಸು ಇದ್ದಳು. ಸೇವಕನೊಬ್ಬನು ಚರ್ಮದ ಚೀಲ, ಟ್ರಂಕ್‌ಗಳನ್ನು ಹಿಡಿದುಕೊಂಡು ಅವರ ಹಿಂದೆಯೇ ಹೋಗುತ್ತಿದ್ದನು. ಸೇವಕನು ತಂದ ಸಾಮಾನುಗಳನ್ನು ಒಳಗಿಟ್ಟುಕೊಂಡರು. ನೋಡಿದರೆ ಅವರಿಬ್ಬರೂ ಸತ್ಕುಲ ಪ್ರಸೂತರಾಗಿ ತೋರುತ್ತಿದ್ದರು. ಎರಡನೇ ತರಗತಿಯಲ್ಲಿ ಪ್ರಯಾಣ ಮಾಡುತ್ತಿದ್ದುದರಿಂದ, ಶ್ರೀಮಂತರಿರಬೇಕೆಂದು ಸ್ಪಷ್ಟವಾಗುತ್ತಿದ್ದಿತು. ವೇಷ-ಭೂಷಣಗಳನ್ನು ನೋಡಿದರೆ, ಈಗಿನ ಕಾಲದ ವಿದ್ಯೆಕಲಿತವಳಂತೆ ಆಕೆಯು ಕಾಣಿಸುತ್ತಿದ್ದಳು.

ಅಷ್ಟರೊಳಗೆ ರೈಲಿನ ಗಾರ್ಡು ರೈಲು ಮುಂದಕ್ಕೆ ಹೊರಡಲು ಸೀಟಿ ಊದಿ, ಹಸರು ಬಾವಟವನ್ನು ಬೀಸಿದನು. ಒಡನೆಯೆ ನಾನು ನಾಚಿಕೆಯಿಂದಲೂ ಭಯದಿಂದಲೂ ಅದೇ ಗಾಡಿಯನ್ನು ಸೇರಿ, ಮೊದಲು ಕುಳಿತಿದ್ದ ಸ್ಥಳದಲ್ಲಿ-ಯೇ ಕುಳಿತುಕೊಂಡೆನು ಕಣ್ಣುಗಳು ತಾವಾಗಿಯೇ ಆ ಸುಂದರಿಯ ಕಡೆಗೆ ಹೊರಟವು. ಮಣ್ಣಿನ ಹೆಂಟೆಯಲ್ಲಿ ನೋಡಿದ ಆಕಾರಕ್ಕೂ ಎದುರಿಗೆ ಕುಳಿತಿದ್ದ ಸುಂದರಿಗೂ ಸ್ವಲ್ಪವೂ ವ್ಯತ್ಯಾಸವಿಲ್ಲದಿರುವದನ್ನು ಕಂಡು, ನನಗೆ ಹಿಂದೆಂದೂ ಉಂಟಾಗದೇ ಇದ್ದ ಆಶ್ಚರ್ಯವುಂಟಾಯಿತು. ಹೆಚ್ಚು ಹೊತ್ತು ಆಕೆಯನ್ನು ನೋಡುವುದು ಗೌರವವಲ್ಲವೆಂದು ದೃಷ್ಟಿಯನ್ನು ಹಿಂತಿರುಗಿಸಿ, ಆ ದಿನದ ವರ್ತಮಾನ ಪತ್ರಿಕೆಯೊಂದನ್ನು ಕಣ್ಣೆದುರಿಟ್ಟುಕೊಂಡೆನು.

ಆ ಸುಂದರಿಯ ಜೊತೆಗೆ ಬಂದ ಪ್ರೌಢ ಹೆಂಗಸು ತಾನು ಕುಳಿತ ಸ್ಥಳದಿಂದೆದ್ದು ನನ್ನ ಹತ್ತಿರಕ್ಕೆ ಬಂದು ನನ್ನನ್ನು ಕೇಳಿದಳು:--"ಇಲ್ಲಿ ಮೇಲ್ಗಡೆಗಿರುವ ಸಾಮಾನೆಲ್ಲವೂ ತಮ್ಮದೇ ಏನು?"

ನಾನು ತಲೆಯನ್ನಲ್ಲಾಡಿಸಿ ಹೌದೆಂದೆನು. ತಿರುಗಿ ಆಕೆಯು ಹೇಳಿದಳು: "ತಾವೆಲ್ಲಿಗೆ ಹೋಗಬೇಕು?"

ಆಕೆಯು ನಿಸ್ಸಂಕೋಚವಾಗಿ ನನ್ನೊಡನೆ ಮಾತನಾಡುತ್ತಿರುವದನ್ನು ನೋಡಿ, ನಾಚುವುದು ಉಚಿತವಲ್ಲವೆಂದು ನಾನೂ ನಿರ್ಭಯದಿಂದ ಮಾತನಾಡತೊಡಗಿದೆನು. ಆ ಪ್ರೌಢ ಹೆಂಗಸಿನೊಡನೆ ಸಂಭಾಷಣೆ ಮಾಡುವದರಿಂದ ಆ ಸುಂದರಿಯ ಹೆಸರು, ಸ್ಥಳ, ವಿವಾಹವಾಗಿದೆಯೇ ಇಲ್ಲವೇ ಎಂಬದು ಮುಂತಾದುದನ್ನು ತಿಳಿಯಬಹುದೆಂದು ನನ್ನ ಯೋಚನೆಯಿದ್ದಿತು.

ನಾನು ಉತ್ತರವಿತ್ತೆನು:—"ಕಲ್ಕತ್ತೆಗೆ ಹೋಗಬೇಕು."

ಆಕೆಯು ಹೇಳಿದಳು:"ಓಹೊ! ಹೀಗೊ? ಹಾಗಾದರೆ ಸೀತಾರಾಂಪುರದವರೆಗೆ ನಮ್ಮ ಜೊತೆಯಲ್ಲಿರುತ್ತೀರಿ ನೀವು. ನಾವಿಬ್ಬರೂ ಸೀತಾರಾಂಪುರದಲ್ಲಿ

ಳಿದು ಅಲಹಾಬಾದಿಗೆ ಹೋಗುವೆವು.''

ಒಡನೆಯೆ ನನ್ನ ಬಾಯಿಂದ ಹೊರಟಿತು:-''ಏನು, ಅಲಹಾಬಾದಿಗೊ?''

ಆಕೆಯು ಹೇಳಿದಳು:—''ಅದೇನು ಅಲಹಾಬಾದಿನ ಹೆಸರನ್ನು ಕೇಳಿ ಆಶ್ಚರ್ಯಪಟ್ಟಿರಿ?''

ನಾನು ಮಾತನಾಡುತ್ತಿದ್ದುದು ಆ ಪ್ರೌಢ ಹೆಂಗಸಿನೊಡನೆಯಾದರೂ ಆ ಸುಂದರಿಯು ಮಧ್ಯೆ ಮಧ್ಯೆ ನನ್ನನ್ನು ಓರೆಗಣ್ಣಿನಿಂದ ನೋಡುತ್ತ, ನಮ್ಮ ಸಂಭಾಷಣೆಯನ್ನು ಆದರದಿಂದ ಕಿವಿಗೊಟ್ಟು ಕೇಳುತ್ತಿದ್ದಳು.

ನಾನು ಹೇಳಿದೆನು:—''ಆಶ್ಚರ್ಯಕ್ಕೆ ಕಾರಣವಿದು: ನನ್ನ ವಾಸ ಸ್ಥಳವೂ ಅಲಹಾಬಾದೇ ಇರುವದು.''

ಆ ಮೇಲೆ ಬಹು ಹೊತ್ತಿನವರೆಗೆ ಆ ಪ್ರೌಢ ಹೆಂಗಸಿನೊಡನೆ ಏನೇನೋ ಮಾತನಾಡುತ್ತ ಇದ್ದೆನು. ಮಧ್ಯದಲ್ಲಿಲ್ಲಾದರೂ ಒಂದೊಂದು ಬಾರಿ ಆ ಸುಂದರಿಯೂ ಮಾತನಾಡತ್ತಿದ್ದಳು; ಆದರೆ ನನ್ನೊಡನೆ ಅಲ್ಲ; ಆ ಪ್ರೌಢಳೊಡನೆ. ಈಗಿನ ಕಾಲದ ಸ್ಕೂಲ್‌ಗಳಲ್ಲಿ ಓದಿ ಶಿಕ್ಷಿತಳೆನಿಸಿದ್ದರೂ ಕೂಡ ಆಕೆಯು ಗುರುತಿಲ್ಲದವರೊಡನೆ ಮಾತನಾಡುವದು ಉಚಿತವಲ್ಲವೆಂದು ತಿಳಿದಿರುವಂತೆ ತೋರುತ್ತಿದ್ದಿತು. ಪ್ರೌಢ ಹೆಂಗಸಿನಿಂದ ಆ ಸುಂದರಿಯ ಎಲ್ಲ ಸಂಗತಿಯೂ ಸಾಮಾನ್ಯವಾಗಿ ತಿಳಿಯಿತು.

ಆ ಸುಂದರಿಯು ಅಲಹಾಬಾದಿನವಳು. ಪ್ರೌಢ ಹೆಂಗಸಿಗೆ ಆಕೆಯು ಅಕ್ಕನ ಮಗಳಾಗಬೇಕು. ಸುಂದರಿಯು ಬಹಳ ಕಾಲದಿಂದ ನೋಡದೇ ಇದ್ದ ತನ್ನ ಅತ್ತೆಯನ್ನು ನೋಡಿಕೊಂಡು ಬರುವದಕ್ಕಾಗಿ ಆಕೆಯಿರುವ ಕ್ವಿಲನ್ ಎಂಬ ಊರಿಗೆ ಹೋಗಿದ್ದಳು. ''ಅಲಹಾಬಾದಿನಲ್ಲಿ ನಿನಗೆ ವಿವಾಹವು ನಿಶ್ಚಯವಾಗಿದೆ; ಮನೆಗೆ ಬಾ.'' ಎಂದು ಸುಂದರಿಯ ತಂದೆಯು ಆಕೆಗೆ ತಂತಿ ಕಳುಹಿಸಿದ್ದನು. ಸೀತಾರಾಂಪುರದಲ್ಲಿ ಆಕೆಯ ಇನ್ನೊಬ್ಬ ಸಂಬಂಧಿಕರ ಮನೆಯಿದ್ದಿತು. ಅಲ್ಲಿಗೆ ಹೋಗಿ ಅಲ್ಲಿಂದ ಅಲಹಾಬಾದಿಗೆ ಹೋಗಬೇಕೆಂದು ನಿಶ ಯವಾಗಿದ್ದಿತು. ಬರುವ ವಿವಾಹ ಮುಹೂರ್ತಗಳಲ್ಲಿ ಮೊದಲನೇ ಮುಹೂರ್ತದಲ್ಲಿಯೇ ಆಕೆಗೆ ವಿವಾಹವಾಗುವದು. ವರನೂ ಅಲಹಾಬಾದಿನವನೇ ಇರುವನು.

ಇವಿಷ್ಟು ಸಂಗತಿಗಳು ನಮ್ಮ ಸಂಭಾಷಣೆಯಿಂದ ತಿಳಿದು ಬಂದವು. ನಾನು ಆ ಸುಂದರಿಯನ್ನು ಚೆನ್ನಾಗಿ ನೋಡಿ ನಿಶ್ಚಯವಾಗಿ ತಿಳಿದೆನು:— ''ನಾನು ಮಣ್ಣಿನ ಪೆಟ್ಟಿಯಲ್ಲಿ ಈಕೆಯನ್ನೇ ನೋಡಿದುದು ಅಲ್ಲಿ ನೋಡಿದುದಕ್ಕಿಂತಲೂ ಸಾವಿರ ಪಾಲಿನಷ್ಟು ಹೆಚ್ಚಾಗಿರುವ ಸೌಂದರ್ಯವು ಸಾಕ್ಷಾತ್ತಾಗಿ ನೋಡುವ ಈ ಆಕಾರದಲ್ಲಿ ಕಾಣಿಸುತ್ತಿದೆ.'' ಮತ್ತು ಮನದಲ್ಲಿ ಆಲೋ

ಚಿಸಿದೆನು:—"ಆ ಮಹಾತ್ಮನು ನುಡಿದಂತೆ ಎಲ್ಲವೂ ನಡೆದಿದೆ. ಇದೊಂದು ಮಾತ್ರ ಬಾಕಿಯಿದೆ; ಆದರೆ ಈಕೆಯ ವಿವಾಹವು ಅಲಹಾಬಾದಿನಲ್ಲಿರುವ ವರನೊಡನೆ ಆಗುವದೆಂದು ಈ ಹೆಂಗಸು ಹೇಳುತ್ತಾಳೆ. ಇದೇನು! ಇಲ್ಲಿಯ ವರೆಗೆ ಮಹಾತ್ಮನ ಮಾತೆಲ್ಲವೂ ನಿಜವಾಗಿ ಪರಿಣಮಿಸಿ, ಮುಖ್ಯವಾದ ಫಲ ದಲ್ಲಿಯೇ ನನ್ನ ದುರದೃಷ್ಟದಿಂದ ಸುಳ್ಳಾಗುವದೇ? ಈ ಸುಂದರಿಯೊಡನೆ ನನಗೆ ವಿವಾಹವಾಗದೇ ಹೋದರೆ, ಖಂಡಿತವಾಗಿಯೂ ಆ ಮಹಾತ್ಮನು ಮೋಸಗಾರನೆಂದೆಣಿಸುವೆನು."

ಕ್ವಿಲನ್ ಸ್ಟೇಶನ್ನಿನಿಂದ ಸೀತಾರಾಂಪುರದ ವರೆಗೆ ನನ್ನ ಪ್ರಯಾಣವು ಆ ಹೆಂಗಸರೊಡನೆ ಸುಖವಾಗಿ ಜರುಗಿತು.

ತಿರುಗಿ ಮನಸ್ಸಿನಲ್ಲಿ ಆಲೋಚಿಸಿದೆನು:—"ಈಕೆಯ ತಂದೆಯ ಹೆಸರು, ಸ್ಥಳ ಮುಂತಾದುದು ನನಗೆ ತಿಳಿದೇ ಇದೆ. ಆತನು ಅಲಹಾಬಾದಿನಲ್ಲಿಯೇ ವಾಸ ಮಾಡುತ್ತಾನೆ. ಆತನು ಈಕೆಯನ್ನು ನನಗೆ ಕೊಟ್ಟು ವಿವಾಹ ಮಾಡು ವಂತೆ ಏನಾದರೂ ಪ್ರಯತ್ನವನ್ನು ನಾನು ಈಗ ಮಾಡಲೇಬೇಕಾಯಿತು. ಇರಲಿ ನಮ್ಮ ತಾಯಿಗೆ ಈ ವಿಚಾರವನ್ನು ತಿಳಿಸುತ್ತೇನೆ. ಹೇಗಾದರೂ ಮಾಡಿ ಆ ಮಹಾತ್ಮನ ನುಡಿಯು ನಿಜವಾಗುವಂತೆ ಪ್ರಯತ್ನ ಮಾಡಬೇಕು."

ಹೀಗೆ ಆಲೋಚಿಸುತ್ತಿದ್ದಾಗಲೇ ಸೀತಾರಾಮಪುರವು ಬಂದುಬಿಟ್ಟಿತು. ರೈಲಿನಿಂದಿಳಿಯುವಾಗ ತಿರುಗಿ ಆ ಪ್ರೌಢ ಹೆಂಗಸಿನ ಹತ್ತಿರ ಆ ಸುಂದರಿಯ ತಂದೆಯ ಹೆಸರು, ಸ್ಥಳ ಮುಂತಾದುದನ್ನು ಕೇಳಿದೆನು. ಆಕೆಯೂ ಶಂಕಿಸದೆ ತಿರುಗಿ ಹೇಳಿದಳು. ರೈಲಿನಿಂದಿಳಿಯುವಾಗ ಆ ಸುಂದರಿಯು ನಾಚಿಕೆ ಪಡುತ್ತ ನನ್ನ ಮೇಲೆ ಕಡೆಗಣ್ಣಿನ ನೋಟವನ್ನು ಬೀರಿ ಮೆಲ್ಲಮೆಲ್ಲನೆ ಇಳಿದಳು. ಆಕೆಯ ವಿಷಯದಲ್ಲಿ ನಾನೆಷ್ಟು ಉತ್ಕಂಠಿತನಾಗಿರುವೆನೆಂಬುದನ್ನು ಆಕೆಯು ಹೇಗೆ ತಾನೇ ತಿಳಿದಾಳು?

ಈ ಸಂಗತಿಯು ನಡೆದು ಕೆಲವು ದಿನಗಳು ಕಳೆದು ಹೋದುವು. ಆ ಸುಂದರಿಯನ್ನೂ ಮತ್ತು ಆ ಪ್ರೌಢ ಹೆಂಗಸನ್ನೂ ನಾನು ಮರೆಯಲಿಲ್ಲ. ಒಂದು ತಿಂಗಳಾದ ಮೇಲೆ ನಾನು ಅಲಹಾಬಾದಿಗೆ ಹೋದೆನು. ಮನಸ್ಸಿನಲ್ಲಿ "ರೈಲಿನಲ್ಲಿ ಕಂಡಿರುವ ಸುಂದರಿಯ ಸಂಗತಿಯನ್ನು ತಾಯಿಯ ಹತ್ತಿರ ಹೇಳಿ, ಆಕೆಯನ್ನಲ್ಲದೆ ಬೇರೆ ಯಾರನ್ನೂ ವಿವಾಹವಾಗಲಾರನೆಂದೇ ಹೇಳುವೆನು. ಆಗ ಏನಾದರೂ ಉಪಾಯ ಮಾಡಿ ತಾಯಿಯು ನನ್ನ ಮಾತನ್ನು ನಡೆಯಿ ಸುವಳು" ಎಂದು ಆಲೋಚಿಸಿಕೊಂಡಿದ್ದೆನು. ಮನೆಗೆ ಹೋದ ಮಾರನೇ ದಿನ ತಾಯಿಯೊಡನೆ ಗುಟ್ಟಾಗಿ ಮಾತನಾಡುವ ಅವಕಾಶವು ದೊರೆಯಿತು.

ಆಕೆಯು ಆಶ್ಚರ್ಯದಿಂದ ಕೇಳಿದಳು—"ಏನು, ಏನು ಹೇಳುವೆ?"

ನಾನು ಹೇಳಿದೆನು:—"ನೀನು ನಿಶ್ಚಯಮಾಡಿದ ವಿವಾಹದ ವಿಷಯದಲ್ಲಿಯೇ ಸ್ವಲ್ಪ ಹೇಳಬೇಕೆಂದಿರುವೆನು."

ಆಕೆಯು ಹೇಳಿದಳು:-"ಏನೋ, ವಿವಾಹದ ವಿಷಯದಲ್ಲಿ ಏನು ಹೇಳಬೇಕೆಂದಿರುವೆ? ತಿರುಗಿ ಸಾಧ್ಯವಿಲ್ಲವೆಂದು ಹೇಳಬೇಕೆಂದಿರುವೆಯಾ?"

ನಾನು ಹೇಳಿದೆನು:-"ಇಲ್ಲ-ಇಲ್ಲ; ಅಮ್ಮಾ, ಹೀಗಲ್ಲ. ನೀನು ನಿಶ್ಚಯಮಾಡಿದ ಹುಡುಗಿಯೊಡನೆ ವಿವಾಹವಾಗುವುದು ನನಗೆ ಇಷ್ಟವಿಲ್ಲ."

ಆಶ್ಚರ್ಯದಿಂದಾಕೆಯು ಹೇಳಿದಳು—"ಏನು ಕಾರಣ? ಆಕೆಯಲ್ಲಿ ಏನಾದರೂ ದೋಷವಿರುವದನ್ನು ನೀನು ನೋಡಿರುವೆಯಾ? ಅಥವಾ ಕೇಳಿರುವೆಯಾ? ನಾನೇನೋ ಆಕೆಯ ಕುಲ, ನಡೆ, ನುಡಿ, ವಿದ್ಯಾ, ಬುದ್ಧಿ ಎಲ್ಲವನ್ನೂ ಚೆನ್ನಾಗಿ ನೋಡಿ, ವಿಚಾರಿಸಿಯೇ ನಿರ್ಧರಿಸಿರುವೆನು. ಆ ಹುಡುಗಿಯು ತುಂಬಾ ಸುಶೀಲಳು. ಹೀಗಿರುವಾಗ, ಬೇಡವೆನ್ನಲು ಕಾರಣವೇನು? ಹೇಳು."

ನಾನು ಹೇಳಿದೆನು:—"ಇಲ್ಲ-ಇಲ್ಲ. ಆಕೆಯ ಗುಣದೋಷಗಳ್ಯಾವುವನ್ನೂ ನಾನು ಕಂಡಿಲ್ಲ; ಕೇಳಿಯೂ ಇಲ್ಲ. ಅದಲ್ಲ. ನಿಜವಾದ ಸಂಗತಿಯು ಇದು; ನಾನಾಗಿಯೇ ಬೇರೊಬ್ಬ ಹುಡುಗಿಯನ್ನು ನಿಶ್ಚಯಮಾಡಿರುವೆನು."

ತಾಯಿಯು ಈ ನನ್ನ ಮಾತಿನಿಂದ ಆಕಾಶದಿಂದ ಕೆಳಗೆ ಬಿದ್ದಂತಾದಳು. ಆಕೆಯು ಆಶ್ಚರ್ಯದಿಂದ ಕೇಳಿದಳು:-"ಮಗೂ, ಮಧುರ, ಎಲ್ಲವೂ ಚೆನ್ನಾಗಿದೆ. ಹೇಳು, ಇದೆಲ್ಲ ಹೇಗಾಯಿತು? ಮೊದಲು ನೀನು ವಿವಾಹವನ್ನೇ ಒಪ್ಪುತ್ತಿರಲಿಲ್ಲ. ಈಗಲಾದರೋ ನೀನಾಗಿಯೇ ಹುಡುಗಿಯ ನಿಶ್ಚಯವನ್ನು ಮಾಡಿಬಿಟ್ಟೆಯಾ! ಬಹಳ ಚೆನ್ನಾಗಿದೆ. ಈಗಿನ ಕಾಲದ ಹುಡುಗರಿಗೆ ತಾಯಿ-ತಂದೆಗಳ ಅಪೇಕ್ಷೆಯೇ ಇರುವದಿಲ್ಲ. ಏನೋ ಸ್ವಲ್ಪ ಓದಿ, ಕಲಿತು, ತಾಯಿ-ತಂದೆಗಳು ನಿರ್ಧರಿಸಿದ ಹೆಂಡತಿಯನ್ನು ಕೂಡ ಒಪ್ಪದೇ ಇರುವಷ್ಟು ಬುದ್ಧಿವಂತರಾಗಿ ಬಿಟ್ಟಿರುತ್ತಾರೆ. ಮಾಡುವುದೇನು? ನಮ್ಮ ಅದೃಷ್ಟ! ಇರಲಿ. ಹೇಳು, ಆ ಹುಡುಗಿಯು ಯಾರು?"

ನಾನು ನಾಚುತ್ತ ಹೇಳಿದೆನು:—"ಇಲ್ಲಿಯವಳೇ ಇರುವಳು. ನಾನು ಪಾಟ್ನಾಕ್ಕೆ ಹೋಗಿ ಹಿಂತಿರುಗಿ ಬರುತ್ತಿದ್ದಾಗ ರೈಲಿನಲ್ಲಿ ನೋಡಿದೆನು. ನಾರಾಯಣಸ್ವಾಮಿ ಬೀದಿಯ ರಾಘವೇಂದ್ರರಾಯರ ಮಗಳು."

ತಾಯಿಯು ಸ್ವಲ್ಪ ಹೊತ್ತು ಆಶ್ಚರ್ಯದಿಂದ ನನ್ನ ಮುಖವನ್ನು ನೋಡಿದಳು. ಆ ಮೇಲೆ ಗಟ್ಟಿಯಾಗಿ ನಕ್ಕುಬಿಟ್ಟಳು. ತಾಯಿಯು ಹಾಗೆ

ಕಾರಣವಿಲ್ಲದೆ ನಗುವುದನ್ನು ನೋಡಿ ನಾನು ತುಂಬಾ ಗಾಬರಿಯಾದೆನು. ನಾನು ಹೇಳಿದುದರಲ್ಲಿ ನಗುವುದಕ್ಕೆ ಕಾರಣವೇನೂ ಇರಲಿಲ್ಲ. ಆ ಮೇಲೆ ತಾಯಿಯು ಎದ್ದು ಒಳಗೆ ಹೋಗಿ ಒಂದು ಫೋಟೋವನ್ನು ಕೈಯಲ್ಲಿ ಹಿಡಿದು ಕೊಂಡು ಬಂದು ನನ್ನ ಕೈಗೆ ಕೊಟ್ಟು, ನಗುತ್ತಾ ಹೇಳಿದಳು:—"ನೀನಿದೇ ಹುಡುಗಿಯನ್ನು ಹೇಳುತ್ತಿರುವೆಯಾ?"

ನನಗೆ ಆಶ್ಚರ್ಯವಾಗಿ ಏನನ್ನು ಹೇಳುವದಕ್ಕೂ ತೋರಲಿಲ್ಲ. ತಾಯಿಯು ಕೊಟ್ಟ ಫೋಟೋ ನಾನು ನೋಡಿದ ಸುಂದರಿಯದೇ ಆಗಿದ್ದಿತು. ರೋಗಿ ಬಯಸಿದುದೂ ಹಾಲು; ವೈದ್ಯ ಕೊಟ್ಟಿರುವದೂ ಹಾಲು ಎಂಬಂತಾಯಿತು! ನಾನು ನಡುಗುವ ಸ್ವರದಿಂದ ಕೇಳಿದೆನು:-"ಅಮ್ಮಾ, ಈ ಫೋಟೋ ನಿನ್ನ ಹತ್ತಿರಕ್ಕೆ ಎಲ್ಲಿಂದ ಬಂದಿತು? ನಿನಗೀ ಹುಡುಗಿಯ ಗುರತಿರುವುದೇ?"

ತಾಯಿಯು ತಲೆಯಾಡಿಸುತ್ತ ನುಡಿದಳು:—"ಗುರುತಿಲ್ಲದೆ ಏನು? ನಿಜವಾಗಿ ಗುರತಿದೆ. ನನಗಿಲ್ಲದೇ ಇದ್ದರೆ ಇನ್ಯಾರಿಗಿದ್ದೀತು? ಈಕೆಯೊಡನೆಯೇ ನಿನಗೆ ವಿವಾಹ ಮಾಡಬೇಕೆಂದು ನಿರ್ಧರಿಸಿದುದು. ನಿನಗೆ ತೋರಿಸುವದಕ್ಕಾಗಿಯೇ ನಾನೀ ಫೋಟೋವನ್ನು ತರಿಸಿ ಇಟ್ಟುಕೊಂಡಿದ್ದೆನು. ನಾನು ಕಾಗದದಲ್ಲಿ ಇದನ್ನು ಬರೆದಿದ್ದೆನು; ನಿನಗೆ ನೆನಪಿಲ್ಲವೆ?"

ನಾನೇನು ಹೇಳಲಿ? "ಒಂದು ವರ್ಷದಿಂದ ಈಕೆಯನ್ನು ಹೃದಯದಲ್ಲಿ ಧರಿಸಿರುವೆನೆಂದು ಹೇಗೆ ಹೆಳಲಿ? ಆದರೆ ಈ ಯೋಗವು ತುಂಬಾ ಅದ್ಭುತವಾಗಿದೆ. ಮಹಾತ್ಮನ ನುಡಿಯು ಎಲ್ಲ ವಿಷಯದಲ್ಲಿಯೂ ಹೇಗೆ ನಿಜವಾಗಿ ಬಿಟ್ಟಿತು? ಆಶ್ಚರ್ಯ! ಏನಿದು, ಪರಮಾತ್ಮನ ಅಪಾರ ದಯೆಯೇ? ಅಥವಾ ನನ್ನ ಸೌಭಾಗ್ಯವೇ? ಅಥವಾ ಆ ಮಹಾತ್ಮನ ಸಿದ್ಧಿಪ್ರಭಾವವೇ!" ಎಂದಾಶ್ಚರ್ಯಪಟ್ಟೆನು.

† † † † †

ನನ್ನ ವಿವಾಹವು ಆ ಮೇಲೆ ಅದೇ ಹುಡುಗಿಯೊಡನೆ ನಡೆಯಿತ್ತು. ನಾನು ನಿಶ್ಚಯವಾಗಿಯೂ ತಿಳಿದೆನು—ಮಹಾತ್ಮನು ಹೇಳಿದುದು, ತೋರಿಸಿದುದು ಎಲ್ಲವೂ ನಿಜ, ಎಂದು. ಆದರಲ್ಲಿ ಸ್ವಲ್ಪವೂ ಕೂಡ ಸುಳ್ಳಾಗಲಿಲ್ಲ.

ಯಾವ ಶಕ್ತಿಯಿಂದ, ಯಾವ ಬಲದಿಂದ ಮಹಾತ್ಮನು ಅದನ್ನು ಹೇಳಿದನು, ತೋರಿಸಿದನೆಂಬದು ಮಾತ್ರ ತಿಳಿಯಲಿಲ್ಲ.

ನಾನು ಆ ಮಹಾತ್ಮನನ್ನು ತಿರುಗಿ ನೋಡಲಾಗಲಿಲ್ಲ. ಹುಡುಕಿದರೂ ಸಿಗಲಿಲ್ಲ. ಗಂಗಾತೀರವನ್ನು ಆತನು ಬಿಟ್ಟು ಹೋಗಿ ಬಹಳ ದಿನಗಳಾಗಿದ್ದವು. ಆ ಮೊದಲ್ಗೊಂಡು ನಾನು:—"ಧರ್ಮ-ಕರ್ಮಾದಿಗಳು ಮೋಸಗಾರರವು."

ಎಂದು ಹೇಳುವದನ್ನು ಬಿಟ್ಟುಬಿಟ್ಟೆನು. ಅಂದಿನಿಂದ ನನಗೆ ಸಾಧು-ಸಜ್ಜನರಲ್ಲಿ ನಂಬಿಕೆಯು ಸ್ಥಿರವಾಗಿ ನಿಂತಿತು. ಇದನ್ನು ತಿಳಿದುಕೊಂಡೆನು:—"ಈ ಜಗತ್ತಿನಲ್ಲಿ ಮೋಸಗಾರರು ಬಹಳ ಜನರಿರುತ್ತಾರೆ; ಆದರೂ ಕೆಲವೆಡೆಯಲ್ಲಿ ನಿಜವಾದ ಮಹಾತ್ಮರೂ ಇರುತ್ತಾರೆ. ಶಾಸ್ತ್ರಗಳು, ಧರ್ಮ, ಕರ್ಮಗಳೆಲ್ಲವೂ ನಿಜವಾದ ಹಿತವನ್ನು ಸಂಪಾದಿಸುವವು" ಎಂದು.

ಒಂದು ದಿನ ರಾಮಚಂದ್ರನು ಹಿಂದೆ ನಡೆದ ಘಟನೆಯ ವಿಷಯವಾಗಿ ಕೇಳಿದನು –"ಏನೋ ಮಧುರ, ಈಗಲಾದರೂ ಸಾಧು, ಸಜ್ಜನ, ಮಹಾತ್ಮರಲ್ಲಿ ನಂಬಿಕೆಯುಂಟಾಯಿತೋ-ಇಲ್ಲವೊ?"

ನಾನು ಉತ್ತರವಿತ್ತೆನು:—"ಖಂಡಿತವಾಗಿಯೂ ನಂಬುತ್ತೇನೆ. ಅವರು ಮಾತ್ರ ನಿಜವಾದ ಮಹಾತ್ಮರಿರಬೇಕು. ಕೃತಕ ಮಹಾತ್ಮರನ್ನು ನಾನು ಎಂದಿಗೂ ನಂಬಲಾರೆನು."

(ದಿವ್ಯ ದೃಷ್ಟಿಯಿಂದ ಸಂಗ್ರಹ.)

ಸಂಪೂರ್ಣ.